ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಕಿತ್ತೂರು


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಪ್ರಕಾಶ ಗಿರಿಮಲ್ಲನವರ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**KITTURU:** An Introducing Book on the Places in Karnataka that Played a Major Role in the Freedom Struggle, Written by Prakash Girimallanavara, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/–
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಝಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಈ ವರ್ಷ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೭೫ ವಸಂತಗಳು ಪೂರ್ಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಸಮಾಜ ಮತ್ತು ವ್ಯಕ್ತಿಗಳು ನಡೆಸಿದ ಚಳವಳಿ, ವಹಿಸಿದ ಪಾತ್ರಗಳ ಅನ್ವೇಷಣೆ–ಅಧ್ಯಯನ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸವಿನೆನಪಿನ ಮಾಲೆಯಲ್ಲಿ ೭೫ ಕಿರು ಕೃತಿಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾದುದು.

ಸ್ವಾತಂತ್ರ್ಯ ಹೋರಾಟದ ರೂಪ–ಸ್ವರೂಪ, ಧ್ಯೇಯ ಧೋರಣೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಮುಂಬೈ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಈ ಹೋರಾಟ ಆಂಗ್ಲರ ವಿರುದ್ಧವಿದ್ದರೆ, ಮೈಸೂರು ಭಾಗದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ಮತ್ತು ಪರೋಕ್ಷವಾಗಿ ಭಾರತ ಸ್ವಾತಂತ್ರ್ಯಕ್ಕಾಗಿದ್ದಿತು. ಕಲಬುರ್ಗಿ–ಬೀದರ ಪ್ರದೇಶಗಳಲ್ಲಿ ಹೈದರಾಬಾದ ನಿಜಾಮರ ಸಂಸ್ಥಾನದ ರಜಾಕಾರರ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟವಾಗಿತ್ತು. ರಾಮದುರ್ಗ–ಜಮಖಂಡಿ ಮೊದಲಾದ ಸಂಸ್ಥಾನ ರಾಜ್ಯಗಳಲ್ಲಿ ಸರ್ಕಾರದ ಸ್ಥಾಪನೆ ಮತ್ತು ಭಾರತದ ಒಕ್ಕೂಟದಲ್ಲಿ ಈ ಸಂಸ್ಥಾನಗಳ ವಿಲೀನಕರಣದ ಉದ್ದೇಶ ಹೊಂದಿದ್ದಿತು. ಈ ಎಲ್ಲ ಬಗೆಯ ಜನಪರ ಹೋರಾಟಗಳಲ್ಲಿ ಸಮಸ್ತ ಕನ್ನಡಿಗರು ಸಕ್ರಿಯವಾಗಿ ಪಾಲುಗೊಂಡರು. ಸ್ವತಂತ್ರ ಸಂಯುಕ್ತ ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷ ಗಣರಾಜ್ಯ ಸ್ಥಾಪನೆ ಮೊದಲಾದ ಗುರಿಗಳ ಸಾಫಲ್ಯತೆಗಾಗಿ ಕನ್ನಡಿಗರು ಕ್ರಿಯಾತ್ಮಕವಾಗಿ ಭಾಗವಹಿಸಿದರು.

ಈ ಹಿನ್ನೆಲೆಯಲ್ಲಿ ಕಿತ್ತೂರು ಸಂಸ್ಥಾನದ ಪ್ರಮುಖ ಹೋರಾಟ ದೃಷ್ಟಿಯಲ್ಲಿಟ್ಟುಕೊಂಡು ಈ ಕಿರು ಕೃತಿಯನ್ನು ರಚಿಸಿರುವೆ. ಸ್ವಾತಂತ್ರ್ಯ ಹೋರಾಟ

ಕುರಿತು ಈವರೆಗೆ ಬಂದ ಎಲ್ಲ ಕೃತಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಈ ಕೃತಿ ರಚನೆಗೆ ಆಕರವಾಗಿ ಬಳಸಿಕೊಂಡಿದ್ದೇನೆ. ಆ ಎಲ್ಲ ಲೇಖಕ ಮಹನೀಯರಿಗೆ ವಂದನೆಗಳು.

ಇಂಥ ಒಂದು ಮಹತ್ವದ ಯೋಜನೆಯನ್ನು ರೂಪಿಸಿ, ಕ್ಲುಪ್ತ ಅವಧಿಯಲ್ಲಿ ಕೃತಿಗಳನ್ನು ಪ್ರಕಟಿಸುತ್ತಿರುವ ನಮ್ಮ ದಿನಮಾನದ ಕ್ರಿಯಾಶೀಲ ವಿದ್ವಾಂಸರೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಆದ ಡಾ. ಬಿ. ವಿ. ವಸಂತಕುಮಾರ ಅವರಿಗೆ ಅನಂತ ವಂದನೆಗಳು. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಕರಿಯಪ್ಪ ಅವರಿಗೂ ಉಳಿದ ಎಲ್ಲ ಸದಸ್ಯರಿಗೆ ವಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಮೃತ್ಯುಂಜಯ ರುಮಾಲೆ ಅವರು ನನ್ನ ಬೆನ್ನ ಹಿಂದಿನ ಶಕ್ತಿಯಾಗಿ, ಕಣ್ಣ ಮುಂದಿನ ಬೆಳಕಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಪ್ರೇರಣೆ–ಪ್ರೋತ್ಸಾಹ ಇಲ್ಲದಿದ್ದರೆ ಇಷ್ಟು ಬೇಗ ಈ ಕೃತಿಗಳನ್ನು ರಚಿಸಲು ಸಾಧ್ಯವಿರಲಿಲ್ಲ. ಅವರಿಗೆ ಅನಂತ ವಂದನೆಗಳು. ಸಂಪಾದಕರಾದ ಡಾ. ಎಸ್.ಜಿ.ರಾಮದಾಸ ರೆಡ್ಡಿ, ಡಾ. ಪ್ರಕಾಶ ಗ. ಖಾಡೆ, ಶ್ರೀ ನರೇಂದ್ರಕುಮಾರ ಮತ್ತು ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು ಅವರಿಗೆ ಅನಂತ ವಂದನೆಗಳು.

ಆಕರ ಸಾಮಗ್ರಿ ಒದಗಿಸಿಕೊಟ್ಟ ಡಾ. ಬಿ. ನಂಜುಂಡಸ್ವಾಮಿ, ಡಾ. ಸರಜೂ ಕಾಟ್ಕರ್, ಶ್ರೀ ರಾಯನಗೌಡ ಪಾಟೀಲ, ಕಿತ್ತೂರು ಕಲ್ಮಠದ ಪೂಜ್ಯ ಶ್ರೀ ಮಡಿವಾಳ ರಾಜಯೋಗೀಂದ್ರ ಮಹಾಸ್ವಾಮಿಗಳು ಮೊದಲಾದ ಹಿರಿಯರಿಗೆ ವಂದನೆಗಳು.

**ಪ್ರಕಾಶ ಗಿರಿಮಲ್ಲನವರ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ: ಕಿತ್ತೂರು | ೧೫ |
| ಒಳಗಿನ ಶತ್ರುಗಳಿಂದ ಯುದ್ಧ ವಿಫಲವಾಯಿತು | ೨೪ |
| ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ | ೩೪ |
| ಮುಂದುವರಿದ ಹೋರಾಟದ ಕಥೆ | ೪೩ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೦ |

# ಸ್ವಾತಂತ್ರ್ಯ ಹೋರಾಟ : ಕಿತ್ತೂರು

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿ ಹಾಡಿದ ಕೀರ್ತಿ ಕಿತ್ತೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಭಾರತದ ಇತಿಹಾಸಕಾರರು ಸ್ವಾತಂತ್ರ್ಯ ಸಂಗ್ರಾಮವನ್ನು ಕ್ರಿ.ಶ.೧೮೫೭ರಿಂದ ಪ್ರಾರಂಭಿಸುತ್ತಾರೆ. ಅದರಲ್ಲೂ ಝಾಂಸಿ ರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ಹೋರಾಡಿದ ಮೊದಲ ಮಹಿಳೆ ಎಂದು ದಾಖಲಿಸಿದ್ದಾರೆ. ಆದರೆ ಝಾಂಸಿ ರಾಣಿ ಲಕ್ಷ್ಮೀಬಾಯಿಗಿಂತ ೩೩ ವರುಷಗಳ ಪೂರ್ವದಲ್ಲಿಯೇ ಆಂಗ್ಲರ ವಿರುದ್ಧ ಹೋರಾಡಿದ ವೀರಮಹಿಳೆ ಕಿತ್ತೂರು ಸಂಸ್ಥಾನದ ರಾಣಿ ಚನ್ನಮ್ಮ. ಕ್ರಿ.ಶ. ೧೮೨೪ರಲ್ಲಿಯೇ ಆಂಗ್ಲರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಚನ್ನಮ್ಮಳನ್ನು ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕೆ ಎಂದು ಕರೆಯುತ್ತಾರೆ.

ಚನ್ನಮ್ಮ ರಾಣಿ ಒಬ್ಬ ಮಹಿಳೆಯಾಗಿ ಬಲಾಢ್ಯ ಬ್ರಿಟಿಷರ ವಿರುದ್ಧ ಹೋರಾಡಿದ ಅವಳ ಶೌರ್ಯ, ರಾಷ್ಟ್ರಾಭಿಮಾನ ಹಾಗೂ ಉದಾತ್ತ ಮಾನವೀಯ ಗುಣಗಳು ಎಂದೆಂದಿಗೂ ಆದರ್ಶಮಯವಾದವು. ಇಂಥ ಹೋರಾಟಗಾರ್ತಿಯ ಬದುಕು ನಮ್ಮ ಇಂದಿನ ಯುವಜನಾಂಗಕ್ಕೆ ಪ್ರೇರಣದಾಯಕವಾಗಿದೆ. ಅಂತೆಯೇ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಬರೆಯುವಾಗ ಕಿತ್ತೂರು ಸಂಸ್ಥಾನದ ಚನ್ನಮ್ಮ ರಾಣಿಯ ಹೋರಾಟದ ಕಥನವನ್ನು ಸ್ಮರಿಸಲೇಬೇಕಾಗುತ್ತದೆ.

ವಿಜಯನಗರೋತ್ತರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ನೂರಾರು ರಾಜಕೀಯ ಸಂಸ್ಥಾನಗಳಲ್ಲಿ ಕಿತ್ತೂರು ಸಂಸ್ಥಾನವೂ ಒಂದು. ೧೪ ಕರ್ಯಾತ್ (ವಿಭಾಗ)ಗಳ ಈ ಸಂಸ್ಥಾನ ಅತ್ಯಂತ ಶ್ರೀಮಂತವೂ ಸಮೃದ್ಧವೂ ಆದ ಇತಿಹಾಸವನ್ನು ಹೊಂದಿದೆ. ಇಂದು ಕಿತ್ತೂರು ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ–೪ರ ರಾಜಮಾರ್ಗದಲ್ಲಿ ಬೆಳಗಾವಿ–ಧಾರವಾಡ ನಗರಗಳ ಮಧ್ಯದಲ್ಲಿ ಇರುವ

ಒಂದು ಸಣ್ಣ ಪಟ್ಟಣ. ಆದರೆ ಅದು ಒಂದು ಕಾಲಕ್ಕೆ ಭವ್ಯ ಸಂಸ್ಥಾನವನ್ನು ಹೊಂದಿದ ಮಹಾನಗರವಾಗಿತ್ತು. ಕಿತ್ತೂರು ಸಂಸ್ಥಾನ ಕ್ರಿ.ಶ. ೧೫೮೫ರಲ್ಲಿ ಸಗರ ನಾಡಿನಿಂದ ಬಂದ ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ಎಂಬ ಶೂರ ಸೇನಾನಿಗಳಿಂದ ಪ್ರಾರಂಭವಾದ ಈ ಸಂಸ್ಥಾನ ಮೊದಲು ಮುಗುಟಖಾನ ಹುಬ್ಬಳ್ಳಿ ಅಸ್ತಿತ್ವಕ್ಕೆ ಬಂದಿತು. ನಂತರ ಸಂಪಗಾವಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ನಂತರ ಕ್ರಿ.ಶ. ೧೬೬೦ರಿಂದ ಕ್ರಿ.ಶ. ೧೬೯೧ರವರೆಗೆ ಸಂಸ್ಥಾನವನ್ನು ಆಳಿದ ಅಲ್ಲಪ್ಪಗೌಡ ಸರದೇಸಾಯಿ ಈ ಸಂಸ್ಥಾನವನ್ನು ಕಿತ್ತೂರಿಗೆ ವರ್ಗಾಯಿಸಿ, ಕಿತ್ತೂರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಪ್ರಾರಂಭಿಸಿದನು. ಈತನೇ ಕಿತ್ತೂರಿನಲ್ಲಿ ಭವ್ಯವಾದ ಕಿತ್ತೂರು ಕೋಟೆಯನ್ನು ಕಟ್ಟಿದನು.

ಕಿತ್ತೂರು ಸಂಸ್ಥಾನ ಒಂದು ಚಿಕ್ಕ ಸಂಸ್ಥಾನವಾಗಿತ್ತು. ಕೇವಲ ೨೮೩ ಊರುಗಳು, ೭೪ ಕೊಪ್ಪಗಳ ಸಂಸ್ಥಾನವಾಗಿದ್ದರೂ, ಅದರ ಪರಿಸರದ ಗಡಿಸೀಮೆಗಳಲ್ಲಿ ಅನೇಕ ರಾಜ್ಯಗಳು ಕೂಡಿದ್ದವು. ಒಂದು ಕಡೆ ಪೋರ್ಚುಗೀಸರು, ಉತ್ತರದಲ್ಲಿ ಮರಾಠರು, ಮತ್ತೊಂದು ದಿಕ್ಕಿಗೆ ವಿಜಯಪುರದ ಆದಿಲಶಾಹಿಗಳು, ದಕ್ಷಿಣಕ್ಕೆ ಸವಣೂರಿನ ನವಾಬರು, ಮೈಸೂರಿನ ಹೈದರಾಲಿ–ಟಿಪ್ಪು ಇವರೆಲ್ಲ ಕಿತ್ತೂರು ಸಂಸ್ಥಾನವನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ಹೊಂಚು ಹಾಕುತ್ತಿದ್ದರು. ಇವರನ್ನೆಲ್ಲ ನಿಗ್ರಹಿಸಿ, ಸಂಸ್ಥಾನವನ್ನು ಕಾಪಾಡಿಕೊಂಡು ಬಂದದ್ದು ಒಂದು ದೊಡ್ಡ ಸಾಹಸವೆಂದೇ ಹೇಳಬೇಕು.

ಕಿತ್ತೂರಿ ಸಣ್ಣ ಸಂಸ್ಥಾನವಾಗಿದ್ದರೂ ಸಮೃದ್ಧವಾಗಿತ್ತು. ಅದರ ಪರಿಕಲ್ಪನೆ ಮಾಡಿಕೊಳ್ಳಲು ನಾವು ಜಾನಪದ ಸಾಹಿತ್ಯಕ್ಕೆ ಮಾರುಹೋಗಬೇಕು. ಜನಪದರು ವರ್ಣಿಸುವ ರೀತಿ ಹೀಗಿದೆ:

**ತ್ಯಾಗದೋಳ್ ಭೋಗದೋಳ್ ಮಿಗಿಲಾದ ಮಿತ್ತೂರು**
**ದೇಗಾವಿ ಬೈಲೂರು ಹೆಸರಾದ ತೋಲಗಿಯು**
**ತೇಗೂರು ತಿಗಡೊಳ್ಳಿ ಬಸವಪುರ ಮಲ್ಲಿಪುರ ಹಿರಿನಂದಿಹಳ್ಳಿಗಳಿಗೆ**
**ಕುರುವಿಂದದಂತಿರುವ ಕುರುಗುಂದ ತುರಮರಿಯು**



**ಪರತರ ಸುಗಂಧಮಂ ಬೀರುತಿಹ ಪ್ರೀಹಿಗಳು**
**ಸರಸಾಗಿ ಬೆಳೆಯುತಿಹ ಕಲಭಾವಿ ಕಡತಾಳ ಮೊದಲಾಗ ಗ್ರಾಮಗಳಿಗೆ**
**ಮಾಂಗಲ್ಯ ಕರಮಾದ ಸತ್ಯೇಂದ್ರ ತಾನಾಗಿ**
**ಸಂಗೀತ ಸಾಹಿತ್ಯ ಶಾಸ್ತ್ರದೋಳ್ ಪಿರಿದೆನಿಸಿ**
**ಬಂಗಾರದಂತಿರುವ ಮಲಸರ್ಜ ಭೂಪನಂ ಸಿಂಗಾರಮಾಗಿರುವುದು.**

ಇಂತಹ ಸಮೃದ್ಧ ನಾಡಿಗೆ ತಮ್ಮ ಭವಿಷ್ಯವನ್ನು ಹುಡುಕಿಕೊಂಡು ನಾಡಿನ ಇಕ್ಕೆಲಗಳಿಂದ ಮನುಷ್ಯ ಪ್ರವಾಹವೇ ಹರಿದು ಬಂದು ಒಂದು ವಿಶಿಷ್ಟ ಜನಾಂಗವನ್ನೇ ಇಲ್ಲಿ ನಿರ್ಮಿಸಿದಂತಾಗಿದೆ. ಅಪಘಾನಿಸ್ತಾನದ ಖಾನಸಾಹೇಬರು, ಅರಬಸ್ತಾನದ ಸೌದಾಗರರು, ಆಫ್ರಿಕಾದ ಅಬಿಸೀನಿಯದ ಹಬಸಿಗಳು, ತುರ್ಕಸ್ತಾನದ ತುರುಕರು ಈ ನಾಡಿಗೆ ಬಂದು ನೆಲೆಸಿದರು. ರಜಪೂತರು, ಮರಾಠರು, ಕಾಶ್ಮೀರದ ಶೈವರು ಇಲ್ಲಿ ಬಂದು ತಂಗಿದರು. ತಮಿಳುನಾಡಿನ ಕಂಚಿಯ ಆಚಾರ್ಯರು ಇಲ್ಲಿ ಕುಲಪುರೋಹಿತರಾದರು. ಆಂಧ್ರದ ಕಮ್ಮೆಯರ ಒಂದು ಓಣಿಯೇ ಕಿತ್ತೂರಿನಲ್ಲಿತ್ತು. ಕಿತ್ತೂರು ನಾಡಿನ ವಿಸ್ತೀರ್ಣ ಪ್ರದೇಶದಲ್ಲಿ ಈ ಜನರು ತಮ್ಮದೇ ಆದ ವಸಾಹತುಗಳನ್ನು ನಿರ್ಮಿಸಿಕೊಂಡು ಬದುಕಿದರು.

ಒಟ್ಟು ಹನ್ನೆರಡು ಜನ ರಾಜರು ಈ ಸಂಸ್ಥಾನವನ್ನು ಆಳಿ ಹೋಗಿದ್ದಾರೆ. ಅವರ ವಿವರ ಹೀಗಿದೆ:

| | | |
|---|---|---|
| ೧. | ಹಿರೇಮಲ್ಲಪ್ಪಶೆಟ್ಟಿ | ೧೫೮೫–೧೫೯೧ |
| ೨. | ಹಿರೇನಾಗನಗೌಡ | ೧೫೯೧–೧೬೩೪ |
| ೩. | ಚಿಕ್ಕನಾಗನಗೌಡ | ೧೬೩೪–೧೬೫೬ |
| ೪. | ಚೆನ್ನಪ್ಪ ಬಿಚ್ಚಗತ್ತಿ | ೧೬೫೬–೧೬೬೦ |
| ೫. | ಅಲ್ಲಪ್ಪಗೌಡ ಸರದೇಸಾಯಿ | ೧೬೬೦–೧೬೯೧ |
| ೬. | ಮುದಿಮಲ್ಲಪ್ಪ ಸರದೇಸಾಯಿ | ೧೬೯೧–೧೬೯೬ |
| ೭. | ಚಿಕ್ಕಮಲ್ಲಪ್ಪ ದೇಸಾಯಿ | ೧೬೯೬–೧೭೧೭ |

೮. ಶಿವನಗೌಡ ಸರದೇಸಾಯಿ ೧೭೧೭–೧೭೩೪

೯. ಮಲವರುದ್ರಗೌಡ ಸರದೇಸಾಯಿ ೧೭೩೪–೧೭೪೯

೧೦. ವೀರಪ್ಪಗೌಡ ಸರದೇಸಾಯಿ ೧೭೪೯–೧೭೮೨

೧೧. ಮಲ್ಲಸರ್ಜ ಪ್ರತಾಪರಾವ ಸರದೇಸಾಯಿ ೧೭೮೨–೧೮೧೬

೧೨. ಶಿವಲಿಂಗರುದ್ರ ಸರ್ಜ ೧೮೧೬–೧೮೨೪

ಮಲಸರ್ಜ ಪ್ರತಾಪರಾವ ಸಮಶೇರಜಂಗ ಬಾಹದ್ದೂರ ಕ್ರಿ.ಶ.೧೭೮೨ರಿಂದ ಕ್ರಿ.ಶ.೧೮೧೬ರವರೆಗೆ ಮೂವತ್ತುನಾಲ್ಕು ವರುಷ ಆಳಿದನು. ಈತ ಪಟ್ಟಕ್ಕೆ ಬಂದಾಗ ಹೈದರನ ಹಾವಳಿ ಬಹಳವಾಗಿತ್ತು. ಹೈದರನನ್ನು ದಂಡಿಸಲು ಪೇಶ್ವೆಗಳು, ಇಂಗ್ಲಿಷರೂ, ನಿಜಾಮರೂ ಕೂಡಿ ದಕ್ಷಿಣದ ಮೇಲೆ ದಂಡೆತ್ತಿ ಬಂದರು. ಹೈದರನ ನಂತರ, ಆತನ ಮಗ ಟಿಪ್ಪುವಿನ ಹಾವಳಿ ಹೆಚ್ಚಾಯಿತು.

ಟಿಪ್ಪು ಒಮ್ಮೆ ಮಲಸರ್ಜನನ್ನು ಬಂಧಿಸಿದನು. ಆಗ ಮಲಸರ್ಜನು ಚಾಣಾಕ್ಷತೆಯಿಂದ ಹೊರಬಂದು, ಟಿಪ್ಪುವಿನ ಮೇಲೆ ದಂಡೆತ್ತಿ ಹೋದನು. ಟಿಪ್ಪುವಿನ ವಶದಲ್ಲಿದ್ದ ಅನೇಕ ಊರುಗಳನ್ನು ವಶಪಡಿಸಿಕೊಂಡನು. ಇದನ್ನು ಕಂಡು ಪೇಶ್ವೆಗಳು, ಇಂಗ್ಲಿಷರು ಕೂಡಿಯೇ 'ಸಮಶೇರಜಂಗ ಬಹಾದ್ದೂರ' ಎಂಬ ಬಿರುದು ಕೊಟ್ಟು ಸನ್ಮಾನಿಸಿದರು.

ಮುಂದೆ ಟಿಪ್ಪುವಿನ ಸದ್ದಡಗಿದರೂ ಪೇಶ್ವೆಗಳಿಗೂ ಮಲಸರ್ಜನನಿಗೂ ಪ್ರೀತಿ ಮೈತ್ರಿ ಉಳಿಯಲಿಲ್ಲ. ಪೇಶ್ವೆ ಮಲಸರ್ಜನ ಏಳ್ಗೆ ಕಂಡು ಅಸೂಯೆ ಪಡತೊಡಗಿದನು. ಕಿತ್ತೂರಿನ ಸ್ವಾಯತ್ತ ಜಹಾಗೀರ ಸ್ಥಾನವನ್ನು ಪೇಶ್ವೆಯವರಿಂದ ಕ್ರಿ.ಶ.೧೮೦೨ರಲ್ಲಿ ಮಲಸರ್ಜ ದೊರೆ ಪಡೆದುಕೊಂಡನು. ಆದರೆ ಕ್ರಿ. ಶ. ೧೮೧೬ರಲ್ಲಿ ಮಲಸರ್ಜ ದೊರೆ ತೀರಿಕೊಂಡನು. ಮಲಸರ್ಜನ ಮೊದಲನೆಯ ಹೆಂಡತಿ ವೀರಮ್ಮನ ಮಗ ಶಿವಲಿಂಗರುದ್ರಸರ್ಜ ಪಟ್ಟಕ್ಕೆ ಬಂದನು. ಈತ ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಂಡು ಕಿತ್ತೂರು ಸಂಸ್ಥಾನದ ಸ್ಥಾನಮಾನವನ್ನು



ಪಡೆದುಕೊಂಡನು. ಅಷ್ಟೇ ಸಂಪತ್‌ಭರಿತವಾದ ಖಾನಾಪೂರ ತಾಲೂಕನ್ನು ಬ್ರಿಟಿಷರಿಗೆ ಕೊಟ್ಟುಬಿಟ್ಟ. ಇದು ರಾಣಿ ಚನ್ನಮ್ಮಳಿಗೆ ಎಳ್ಳಷ್ಟು ಇಷ್ಟವಿರಲಿಲ್ಲ. ವಿರೋಧಿಸಿದರೆ ಮಲಮಗನನ್ನು ಸೇರುತ್ತಿಲ್ಲವೆಂಬ ಜನಾಪವಾದಕ್ಕೆ ಕಾರಣವಾಗಬೇಕಾದೀತೆಂದು ಚನ್ನಮ್ಮ ಸುಮ್ಮನಾಗುತ್ತಾಳೆ. ನಂತರ ರೋಗಗ್ರಸ್ತನಾಗಿದ್ದ ಶಿವಲಿಂಗರುದ್ರಸರ್ಜ ಅಕಾಲಿಕವಾಗಿ ನಿಧನವಾಗುತ್ತಾನೆ. ಆಗ ಸಂಸ್ಥಾನದ ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡವಳು ರಾಣಿ ಚೆನ್ನಮ್ಮ.

ರುದ್ರಗೌಡ ದೇಸಾಯಿಯು ಕೇವಲ ವಿಲಾಸ ಜೀವನದಲ್ಲಿ ಕಾಲ ಕಳೆಯುತ್ತಿದ್ದನು. ನಿರಂಜನಿ ಎಂಬ ಮುಸಲ್ಮಾನ ಪಾತರದವಳ ಮೋಹಕ್ಕೆ ಸಿಲುಕಿ ಅವಳನ್ನು ಲಿಂಗಾಯತ ಧರ್ಮಕ್ಕೆ ಮತಾಂತರಿಸಿ ಮದುವೆಯಾದನು. ಇದನ್ನು ವಿರೋಧಿಸಿದ ಅವನ ತಮ್ಮ ಮಲ್ಲಪ್ಪನನ್ನು ಕೊಲ್ಲಿಸಿದನು. ನಿರಂಜನಿಗೆ ದೇಶನೂರಿನಲ್ಲಿ ಒಂದು ಅರಮನೆ ಕಟ್ಟಿಸಿ ತಾನು ಅಲ್ಲಿಯೇ ಇರಹತ್ತಿದನು. ರಾಜ್ಯಭಾರದಲ್ಲಿ ಶಿಥಿಲತೆ ಉಂಟಾಗಲು ರುದ್ರಗೌಡನ ಪಟ್ಟದರಸಿಯಾದ ಮಲ್ಲವ್ವನು ರಾಜ್ಯದ ಎಲ್ಲ ಜವಾಬ್ದಾರಿ ವಹಿಸಿಕೊಂಡು ೧೫ ವರ್ಷ ಸಮರ್ಥವಾಗಿ ಆಳಿದಳು. ಇವಳು ಈ ಸಂಸ್ಥಾನದ ಮೊದಲನೇ ರಾಣಿ ಎನಿಸಿದ್ದಾಳೆ. ಮುಂದೆ ಚೆನ್ನಮ್ಮನಿಗೆ ಇವಳೇ ಮೂಲ ಪ್ರೇರಣೆಯಾಗಿದ್ದಾಳೆ. ರುದ್ರಗೌಡ ಮಲ್ಲವ್ವರಿಗೆ ಸಂತಾನ ಭಾಗ್ಯ ಇಲ್ಲದ್ದರಿಂದ ರುದ್ರಗೌಡನು ತಮ್ಮ ಮಲ್ಲಪ್ಪನ ಮಗ ವೀರಪ್ಪಗೌಡನನ್ನು ದತ್ತಕ ತೆಗೆದುಕೊಂಡು ಉತ್ತರಾಧಿಕಾರಿಯಾಗಿ ನಿಯಮಿಸುತ್ತಾರೆ.

ಹತ್ತನೆಯ ದೊರೆ ವೀರಪ್ಪಗೌಡನಿಗೆ ಸಂತಾನವಿಲ್ಲದೇ ಮೃತಪಟ್ಟಿದ್ದರಿಂದ ಅವನ ರಾಣಿ ಪಾರ್ವತೆವ್ವನು ಮುದಿಮಲ್ಲಪ್ಪ ಸರದೇಸಾಯಿಯ ಮರಿಮಗನಾದ ಮಲ್ಲಸರ್ಜನನ್ನು ದತ್ತಕ ಪಡೆಯುತ್ತಾಳೆ. ಈತನು ರಾಜಕೀಯದಲ್ಲಿ ಅತ್ಯಂತ ಚತುರನಾಗಿದ್ದನು. ಇವನ ಆಳ್ವಿಕೆ ಕಾಲವನ್ನು ಕಿತ್ತೂರಿನ ಇತಿಹಾಸದ ಅಭಿವೃದ್ಧಿಯುಗವೆಂದು ಕರೆದಿದ್ದಾರೆ. ತಲ್ಲೂರ, ದೇಸಗತಿಯ ರುದ್ರಮ್ಮನು ಇವನ ಮೊದಲ ರಾಣಿ, ಚೆನ್ನಮ್ಮನು ಕಾಕತಿ ದೇಸಗತಿಯ ಧೂಳಪ್ಪ ದೇಸಾಯಿಯ ಮಗಳು. ಇವಳು ಕುದುರೆ ಸವಾರಿ ಕ್ಷಾತ್ರವಿದ್ಯೆ ಕಲಿತಿದ್ದಳು. ಕನ್ನಡದ ಜೊತೆಗೆ ಮರಾಠಿ ಉರ್ದು ಇಂಗ್ಲಿಷಿನಲ್ಲಿ ಕೂಡ ಪರಿಣಿತಳಾಗಿದ್ದಳು. ಮೊದಲನೇ

ರಾಣಿ ರುದ್ರಮ್ಮನು ಕೂಡ ಸಮರವಿದ್ಯೆಯಲ್ಲಿ ಪರಿಣಿತಳಾಗಿದ್ದಳು. ಇವಳು ಟಿಪ್ಪುವಿನ ಸರದಾರ ಬದ್ರುತ್ ಜಮಾನಖಾನನೊಡನೆ ದೇಶನೂರಿನಲ್ಲಿ ನಡೆದ ಯುದ್ಧದಲ್ಲಿ ಮಲ್ಲಸರ್ಜನೊಡನೆ ಪ್ರತ್ಯಕ್ಷವಾಗಿ ಭಾಗವಹಿಸಿ ವಿಜಯ ಪಡೆಯಲು ಮಲ್ಲಸರ್ಜನೊಡನೆ ಪ್ರತ್ಯಕ್ಷವಾಗಿ ಭಾಗವಹಿಸಿ ವಿಜಯ ಪಡೆಯಲು ಕಾರಣಳಾದಳು. ಇದರಿಂದ ಕೋಪಗೊಂಡ ಟಿಪ್ಪು ಸುಲ್ತಾನನು ಹೆಚ್ಚಿನ ಸೈನ್ಯ ಕಳಿಸಿ ಮಲ್ಲಸರ್ಜನನ್ನು ಸೆರೆಹಿಡಿದು ಶ್ರೀರಂಗಪಟ್ಟಣದ ಸಮೀಪ ಕಪಾಳದುರ್ಗದಲ್ಲಿ ಬಂಧಿಸಿಟ್ಟನು. ಬಲಿಷ್ಠನೂ ಚಾಣಾಕ್ಷನೂ ಆಗಿದ್ದ ಮಲ್ಲಸರ್ಜನು ಸಮಯ ಸಾಧಿಸಿ ಯುಕ್ತಿಯಿಂದ ಸೆರೆಯಿಂದ ಸೈನ್ಯ ಕೂಡಿಸಿ ಟಿಪ್ಪುವಿನ ರಾಜ್ಯದಲ್ಲಿ ಅನೇಕ ಹಳ್ಳಿಗಳನ್ನು ಲೂಟಿ ಮಾಡುತ್ತ ಕಿತ್ತೂರಿಗೆ ಮರಳಿದನು.

ದೊರೆ ಮಲ್ಲಸರ್ಜನ ಶೂರತನವನ್ನು ಅವನ ಜನಪ್ರಿಯತೆಯನ್ನು ಕಂಡು ಪುಣೆಯ ಪೇಶ್ವೆ ಬಾಜಿರಾಯನಿಗೆ ಸಂಕಟವಾಗುತ್ತಿತ್ತು. ಚಾಡಿಕೋರರ ಮಾತು ನಂಬಿ ಮಲ್ಲಸರ್ಜನಿಂದ ತನಗೆ ಕಂಟಕವಿದೆಯೆಂದು ಭಾವಿಸಿ ಅವನನ್ನು ಬಂಧಿಸಲು ಹೊಂಚು ಹಾಕಿದನು. ಮಲ್ಲಸರ್ಜನನ್ನು ಸಂಧಾನಕ್ಕೆಂದು ಕರೆದು ಬಂಧಿಸಿ ಪುಣೆಯಲ್ಲಿ ಸ್ಥಾನಬದ್ಧತೆಯಲ್ಲಿಟ್ಟನು. ಅಲ್ಲಿ ಮಲ್ಲಸರ್ಜನು ತೀವ್ರವಾಗಿ ಅಸ್ವಸ್ಥನಾದನು. ಅವನ ಆರೋಗ್ಯವು ತೀವ್ರ ಕ್ಷೀಣಿಸಲು ಬಾಜಿರಾಯನು ಅವನನ್ನು ಬಿಡುಗಡೆಗೊಳಿಸಿದನು. ದಾರಿಯಲ್ಲಿ ಅವನ ರೋಗವು ಉಲ್ಬಣಿಸಿತು. ಕಿತ್ತೂರು ತಲುಪಿದ ಕೆಲ ಸಮಯದಲ್ಲಿಯೇ ಅವನು ಮರಣ ಹೊಂದಿದನು.

ವೀರನೂ ಮಹತ್ವಾಕಾಂಕ್ಷಿಯೂ ಚತುರನೂ ನಿಪುಣ ರಾಜಕಾರಣಿಯೂ ರಸಿಕನೂ ಸಾಹಿತ್ಯಪ್ರೇಮಿಯೂ ಆಗಿದ್ದ ಮಲ್ಲಸರ್ಜನಿಗೆ ಶಮಶೇರಜಂಗ ಬಹದ್ದೂರ ಹಾಗೂ ಪ್ರತಾಪರಾವ ಎಂಬ ಬಿರುದುಗಳಿದ್ದವು. ಅವನ ಆಳ್ವಿಕೆಯಲ್ಲಿ ಬಹುಪಾಲು ಸಮಯವು ಯುದ್ಧಗಳಲ್ಲಿಯೂ ದಂಗೆಗಳನ್ನು ಅಡಗಿಸುವುದರಲ್ಲಿಯೂ ಕಳೆಯಿತು. ಆದರೂ ಇವನು ಹಲವಾರು ಸಮಾಜ ಹಿತ ಕಾರ್ಯಗಳನ್ನು ಗುಡಿ ಗುಂಡಾರಗಳನ್ನು ಮಠಮಾನ್ಯಗಳನ್ನು ಕಟ್ಟಿಸಿದನು. ಧಾರ್ಮಿಕ ಕಾರ್ಯಕ್ರಮ ಹಬ್ಬ ಉತ್ಸವಗಳು ಅದ್ದೂರಿಯಿಂದ ಆಚರಿಸಲ್ಪಡುತ್ತಿದ್ದವು. ಪ್ರತಿವರ್ಷ ಶ್ರಾವಣ ಮಾಸದಲ್ಲಿ ಬಸವ ಪುರಾಣ ಪ್ರವಚನ ನಡೆಯುತ್ತಿತ್ತು.



**ಬಸವಪುರಾಣವನೋದಿಸಿ ಜಗದೊಳ್**
**ಪೆಸರ್ವಡೆದವರಾರೀ ಜಗದಿ**
**ರಸಿಕ ಪ್ರಭುವರ ಬಸವೇಶ್ವರನೋಲ್**
**ಎಸಗಿದ ಸದ್ಭಕ್ತಿಯ ಭರದಿ**

**ಮಲ್ಲೇಂದ್ರ ಭಕ್ತಿ ತರಂಗಿಣಿ**

ಇವನ ಕಾಲದಲ್ಲಿ ಮಲ್ಲೇಂದ್ರಪೂಜಾ ವಿಲಾಸ, ಮಲ್ಲೇಂದ್ರ ಮಾನಸೋಲ್ಲಾಸ, ಮಲ್ಲೇಂದ್ರ ವಿಜಯ, ಮಲ್ಲೇಂದ್ರ ತಾರಾವಳಿ ಮೊದಲಾದ ಸಾಹಿತ್ಯ ಕೃತಿಗಳು ರಚಿಸಲ್ಪಟ್ಟವು. 'ದುಂದುಮೆ' ಜಾನಪದ ಸಾಹಿತ್ಯ ಪ್ರಕಾರವು ಇದೇ ಕಾಲಕ್ಕೆ ಅಸ್ತಿತ್ವಕ್ಕೆ ಬಂದಿತು. ಈತನ ಕಾಲದಲ್ಲಿ ಕಿತ್ತೂರು ಅತ್ಯಂತ ವೈಭವದಿಂದ ಮೆರೆಯಿತು.

ಮಲ್ಲಸರ್ಜನ ತರುವಾಯ ಈ ಸಂಸ್ಥಾನವನ್ನು ಶಿವಲಿಂಗ ರುದ್ರಸರ್ಜನು ವಹಿಸಿಕೊಂಡನು. ಈತ ಮಲ್ಲಸರ್ಜನ ಮೊದಲ ಹೆಂಡತಿ ವೀರಮ್ಮನ ಮಗ. ಚಿಕ್ಕ ವಯಸ್ಸಿನಲ್ಲಿ ಸಂಸ್ಥಾನದ ಜವಾಬ್ದಾರಿ ವಹಿಸಿಕೊಂಡ ಶಿವಲಿಂಗ ರುದ್ರಸರ್ಜನು ಪೇಶ್ವೆಗಳ ಕಾಟದಿಂದ ತಪ್ಪಿಸಿಕೊಳ್ಳಲು ಬ್ರಿಟಿಷರಿಗೆ ಸಹಾಯ ಮಾಡಿದನು. ಒಡೆದು ಆಳುವ ನೀತಿಯಿಂದ ಸಂಸ್ಥಾನಿಕರಲ್ಲಿ ಭಿನ್ನಾಭಿಪ್ರಾಯಗಳನ್ನು ಮೂಡಿಸಿ, ಅವರಿಗೆ ಸಹಾಯಕ ಸೈನ್ಯ ಪದ್ಧತಿ ನೀಡುವ ಕಾರ್ಯವನ್ನು ಪ್ರಾರಂಭಿಸಿದ ಬ್ರಿಟಿಷರು ಶಿವಲಿಂಗರುದ್ರನ ಸಹಾಯ ಪಡೆದು ಪೇಶ್ವೆಗಳನ್ನು ಮಟ್ಟಹಾಕಿ, ದಕ್ಷಿಣ ಮಹಾರಾಷ್ಟ್ರವನ್ನು ತಮ್ಮ ಕೈವಶ ಮಾಡಿಕೊಂಡರು.

ಶಿವಲಿಂಗ ರುದ್ರಸರ್ಜನು ಅನಾರೋಗ್ಯದಿಂದ ಬಳಲುತ್ತಿದ್ದ. ತನ್ನ ಸಾವು ಸಮೀಪಿಸುತ್ತಿರುವ ಸಂಗತಿ ತಿಳಿದು ಸಂಸ್ಥಾನದ ಮುಂದುವರಿಕೆಗಾಗಿ ದತ್ತಕ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ, ಚನ್ನಮ್ಮ ರಾಣಿಗೂ ತಿಳಿಸಿ, ಬ್ರಿಟಿಷರಿಗೆ ಪತ್ರ ಬರೆದನು. ದತ್ತು ಪುತ್ರರಿಗೆ ಹಕ್ಕಿಲ್ಲವೆಂಬ ಕಾನೂನು ಮಾಡಿ ಸಂಸ್ಥಾನವನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ಬ್ರಿಟಿಷ್ ಅಧಿಕಾರಿಗಳು ಹೊಂಚು ಹಾಕಿದ್ದರು. ಅವರಿಗೆ ಈ ಸಂಗತಿ ತಿಳಿದು, ಒಬ್ಬ ಸಿವ್ಹಿಲ್ ಸರ್ಜನ್ ಕರೆಸಿ ಶಿವಲಿಂಗ ರುದ್ರಸರ್ಜನಿಗೆ ಔಷಧೋಪಚಾರ ಪ್ರಾರಂಭಿಸಿದರು. ಇದು ಚನ್ನಮ್ಮ

ರಾಣಿಗೂ, ಶಿವಲಿಂಗರುದ್ರ ಸರ್ಜನಿಗೂ ಒಪ್ಪಿಗೆಯಿರಲಿಲ್ಲ. ಇದೆಲ್ಲ ಅವರ ಮನಸ್ಸಿನ ವಿರುದ್ಧ ನಡೆಯಿತು. ಶಿವಲಿಂಗ ಪ್ರಭು ದಿನಾಂಕ ೧೨ ಸೆಪ್ಟಂಬರ್ ೧೮೨೪ರಂದು ಮರಣ ಹೊಂದಿದನು. ಆದರೆ ಅಷ್ಟರಲ್ಲಿ ಮಾಸ್ತಮರಡಿ ಗೌಡರ ಮಗನನ್ನು ದತ್ತಕ ತೆಗೆದುಕೊಂಡಿದ್ದಾರೆಂದು ಕನ್ನೂರ ಮಲ್ಲಪ್ಪಶೆಟ್ಟಿ ಬ್ರಿಟಿಷ್‌ರಿಗೆ ಚಾಡಿ ಹೇಳಿಯಾಗಿತ್ತು. ಬೆಲ್ ಎಂಬ ಅಧಿಕಾರಿ ಕಿತ್ತೂರಿಗೆ ಬಂದು ಆತನೂ ಥ್ಯಾಕರೆಗೆ ಸುಳ್ಳು ವರದಿಯನ್ನೇ ನೀಡಿದ. ಶಿವಲಿಂಗ ಪ್ರಭು ಸೆಪ್ಟಂಬರ್ ೧೧ರಂದೇ ತೀರಿಕೊಂಡಿದ್ದ, ೧೨ರಂದು ನಡೆದ ದತ್ತಕ ಪ್ರಕ್ರಿಯೆ ಸುಳ್ಳು ಸೃಷ್ಟಿಯೆಂದು ಹೇಳಿದ. ಇದನ್ನು ನಂಬಿದ ಥ್ಯಾಕರೆ ದತ್ತು ಪ್ರಕ್ರಿಯೆಯನ್ನು ರದ್ದು ಗೊಳಿಸಿದ ಆದೇಶವನ್ನು ಹೊರಡಿಸಿದ. ಇದರಿಂದ ಸಂಸ್ಥಾನದಲ್ಲಿ ಅನೇಕ ಬೆಳವಣಿಗೆಗಳಾದವು. ಥ್ಯಾಕರೆ ತನ್ನ ಸಹಾಯಕ ಸಿಬ್ಬಂದಿಗಳಾದ ಸ್ಟೀವೆನ್ಸನ್ ಮತ್ತು ಎಲಿಯಟ್ ಎಂಬ ಅಧಿಕಾರಿಗಳನ್ನು ಕಿತ್ತೂರಿಗೆ ಕಳಿಸಿಕೊಟ್ಟ. ಇವರಿಬ್ಬರನ್ನು ಕಿತ್ತೂರು ಸಂಸ್ಥಾನಿಕರು ಗೃಹಬಂಧನದಲ್ಲಿಟ್ಟರು. ಸು.೪೦ ದಿನಗಳ ಎಲಿಯೆಟ್ ಗೃಹಬಂಧಿಯಾಗಿದ್ದ. ಶಿವಲಿಂಗರುದ್ರನ ಹೆಂಡತಿ ವೀರಮ್ಮ ಸಂಸ್ಥಾನದ ನಿಜವಾದ ಹಕ್ಕುದಾರಳಾದಳು. ಚೆನ್ನಮ್ಮನಿಗೂ ವೀರಮ್ಮನಿಗೂ ದ್ವೇಷ ಬರುವ ಹಾಗೆ ಬ್ರಿಟಿಷ್‌ರು ಕುತಂತ್ರ ಹೆಣೆಯತೊಡಗಿದರು. ಥ್ಯಾಕರೆ ಕಿತ್ತೂರಿಗೆ ಬಂದು ಅತ್ತೆ ಸೊಸೆ ನಡುವೆ ಭಿನ್ನಾಭಿಪ್ರಾಯವಿದೆ ಎಂದು ವರದಿ ಮಾಡಿ ಸಂಸ್ಥಾನದ ಖಜಾನೆಗಳನ್ನು ಸೀಲ್ ಮಾಡಿ, ಕನ್ನೂರ ಮಲ್ಲಪ್ಪಶೆಟ್ಟಿ ಮತ್ತು ವೆಂಕಟರಾವ್ ಕಾರಭಾರಿಗಳಿಗೆ ಆಡಳಿತ ಸೂತ್ರವನ್ನು ಒಪ್ಪಿಸಿ ಆದೇಶ ಮಾಡಿದರು. ಕನ್ನೂರ ಮಲ್ಲಪ್ಪಶೆಟ್ಟಿ ಮತ್ತು ವೆಂಕಟರಾವ್ ಇವರು ಬ್ರಿಟಿಷ್‌ರ ಪರವಾಗಿ ಇದ್ದವರು. ಕಿತ್ತೂರು ಸಂಸ್ಥಾನಕ್ಕೆ ಮೊದಲಿನಿಂದಲೂ ಮೋಸ ಮಾಡುತ್ತ ಬಂದವರಾಗಿದ್ದರು. ಚನ್ನಮ್ಮಳ ಆಡಳಿತದಲ್ಲಿ ಇಬ್ಬರೂ ವಿಪರೀತ ಹಸ್ತಕ್ಷೇಪ ಮಾಡುತ್ತಿದ್ದರು. ಬ್ರಿಟಿಷರಿಗೆ ಕಿತ್ತೂರು ಸಂಸ್ಥಾನದ ಬಗ್ಗೆ ಸದಾಕಾಲ ಚಾಡಿ ಹೇಳುವುದರಲ್ಲಿ ಮಗ್ನರಾಗಿದ್ದರು. ಇಂಥ ದುಷ್ಟರ ಕೈಯಲ್ಲಿ ಆಡಳಿತದ ಚುಕ್ಕಾಣಿ ಕೊಟ್ಟಾಗ ಚನ್ನಮ್ಮ ಮತ್ತು ಸಂಸ್ಥಾನದ ಹಿತೈಷಿಗಳು ನಿಜಕ್ಕೂ ಆತಂಕಗೊಂಡರು. ಚನ್ನಮ್ಮ ರಾಣಿಗೆ ಇದರಿಂದ ವಿಪರೀತ ಸಿಟ್ಟು ಬಂದಿತು. ಹೆಡೆತೆಗೆದ ಹಾವಿನಂತಾದಳು. ದೇಶಾಭಿಮಾನ, ದೇಶಗೌರವ, ದೇಶ ಸ್ವಾತಂತ್ರ್ಯದ ಪ್ರಶ್ನೆಯು ಆಕೆಯನ್ನು ಕಿಡಿಕಿಡಿ ಮಾಡಿತು. ತನ್ನ ಸಂಸ್ಥಾನದ ನಿಜವಾದ ವೀರ ಯೋಧರಿಗೆ, ಸರದಾರರಿಗೆ ಹೇಳಿಕಳಿಸಿ ಆಲೋಚನೆ ಮಾಡಿದಳು. ಬ್ರಿಟಿಷರ ಪ್ರತಿನಿಧಿಯ ಕಡೆಗೆ ಪುಣೆಗೆ ಒಬ್ಬ ವಕೀಲನನ್ನು ಕಳುಹಿಸಿಕೊಟ್ಟಳು. ಆದರೆ ಇಷ್ಟರಲ್ಲಿ ದುಷ್ಟ ಮಲ್ಲಪ್ಪಶೆಟ್ಟಿ ಥ್ಯಾಕರೆಗೆ ಇಲ್ಲಸಲ್ಲದ ಚಾಡಿ ಹೇಳಿ ಚನ್ನಮ್ಮಳ ಮೇಲೆ ದ್ವೇಷ ಹುಟ್ಟುವಂತೆ ಮಾಡಿಬಿಟ್ಟಿದ್ದ. ಚನ್ನಮ್ಮ ಈ ವಿಷಯವಾಗಿ ಥ್ಯಾಕರೆಗೆ ಪತ್ರವ್ಯವಹಾರ ಮಾಡಿದರೂ, ಥ್ಯಾಕರೆ ಸಂಸ್ಥಾನವನ್ನು ಹೇಗಾದರೂ ಕಬಳಿಸಲೇ ಬೇಕೆಂದು ಹೊಂಚು ಹಾಕಿದ್ದ. ೧೮೨೪ ಅಕ್ಟೋಬರ್ ೨೨ ರಂದು ಮಹಾನವಮಿ ಇತ್ತು. ಕಿತ್ತೂರು ಸಂಸ್ಥಾನದಲ್ಲಿ ಸಂಭ್ರಮ ಸಡಗರ ಮನೆಮಾಡಿತ್ತು. ಆದರೆ ಅದೇ ದಿನ ಥ್ಯಾಕರೆ ಕಪ್ತಾನ ಬ್ಲ್ಯಾಕ್‌ರೊಂದಿಗೆ ೫೦೦ ಜನ ಸೈನ್ಯ ಸಮೇತ ಕಿತ್ತೂರಿಗೆ ಬಂದಿಳಿದನು. ಕಿತ್ತೂರು ಕೋಟೆಯ ಬಾಗಿಲನ್ನು ಹಾಕಲಾಗಿತ್ತು. ಕೋಟೆಯ ಬಾಗಿಲಿಗೆ ಬಂದೂಕು ಹಾರಿಸತೊಡಗಿದರು. ಕೊನೆಗೆ ಕೋಟೆಯ ಬಾಗಿಲು ತೆರೆಯಿತು. ಬ್ರಿಟಿಷ್‌ರ ಸೇನೆ ಕೋಟೆಯ ಒಳಗೆ ನುಗ್ಗಿತು. ಕಿತ್ತೂರು ಬಾಗಿಲು ಕಾಯುತ್ತಿದ್ದ ಸೈನಿಕರಿಗೂ ಫಿರಂಗಿಯವರಿಗೂ ಭಯಂಕರ ಚಕಮಕಿ ಯುದ್ಧ ನಡೆಯಿತು. ಕಿತ್ತೂರು ಸೈನಿಕರು ಬ್ರಿಟಿಷ್ ಸೈನಿಕರನ್ನು ಹಣ್ಣುಗಾಯಿ ನೀರುಗಾಯಿ ಮಾಡಿದರು. ಅಷ್ಟರಲ್ಲಿ ಥ್ಯಾಕರೆ ಕುದುರೆ ಏರಿ ಕೋಟೆಯ ಒಳಗೆ ಧಾವಿಸಿದ. ಚನ್ನಮ್ಮ ರಾಣಿಯೂ ಆಶ್ವಾರೂಢಳಾಗಿ ಕತ್ತಿ ಝಳಪಿಸುತ್ತ ಬರುತ್ತಿದ್ದಳು. ಅವಳ ಕಡೆಗೆ ಥ್ಯಾಕರೆ ಬರುತ್ತಿದ್ದ. ಇದನ್ನು ಅಮಟೂರು ಬಾಳಪ್ಪ ನೋಡಿದ. ಈತ ಮುಸ್ಲಿಂ ವ್ಯಕ್ತಿ. ಆದರೆ ಸಂಸ್ಥಾನದ ಮೇಲೆ ಅಪಾರವಾದ ಭಕ್ತಿಯಿಟ್ಟುಕೊಂಡವನು. ಚನ್ನಮ್ಮ ರಾಣಿ ಮೇಲೆ ಏರಿ ಬರುತ್ತಿದ್ದ ಥ್ಯಾಕರೆಯನ್ನು ಗಮನಿಸಿದ. ತಕ್ಷಣ ಜಾಗರೂಕನಾದ. ತನ್ನ ಬಂದೂಕಿನಿಂದ ಥ್ಯಾಕರೆ ಎದೆಗೆ ಗುರಿಯಿಟ್ಟ, ಒಂದೇ ಕ್ಷಣದಲ್ಲಿ ಗುಂಡು ಥ್ಯಾಕರೆ ಹೊಟ್ಟೆ ಸೀಳಿಹೋಯಿತು. ಥ್ಯಾಕರೆ ಸತ್ತ ವಿಷಯ ತಿಳಿದ ಬ್ರಿಟಿಷ್ ಸೈನ್ಯ ಹೆದರಿ ಚೆಲ್ಲಾಪಿಲ್ಲಿಯಾಗಿ ಓಡತೊಡಗಿತು. ಬ್ರಿಟಿಷರಿಗೆ ಸಹಾಯ ಮಾಡಿ ಸಂಸ್ಥಾನಕ್ಕೆ ಮೋಸ ಮಾಡಿದ ರಾಜದ್ರೋಹಿ ಮಲ್ಲಪ್ಪಶೆಟ್ಟಿ ಮತ್ತು ಆತನ ಸಂಗಡಿಗರನ್ನು ಆನೆಯ ಕಾಲಿಗೆ ಹಾಕಿ ಜಜ್ಜಲಾಯಿತು. ಹತ್ತೊಂಬತ್ತು ಬ್ರಿಟಿಷ್ ಸೈನಿಕರನ್ನು ಸ್ಥಾನ ಬದ್ಧತೆಯಲ್ಲಿಡಲಾಯಿತು.



ಕಿತ್ತೂರು–ಆಂಗ್ಲೋ ಮೊದಲ ಯುದ್ಧದಲ್ಲಿ ಥ್ಯಾಕರೆ ಸತ್ತ ವಿಷಯ ಮತ್ತು ಕಿತ್ತೂರು ಸೈನಿಕರು ವಿಜಯಿಗಳಾದ ಸಂಗತಿ ಬ್ರಿಟಿಷ್ ಅಧಿಕಾರಿಗಳಿಗೂ

ಮುಂಬೈ ಗವರ್ನರ್‌ರಿಗೂ ತಿಳಿಯಿತು. ಇದರಿಂದ ಬ್ರಿಟಿಷರು ನಿಜಕ್ಕೂ ಹತಾಶರಾದರು. ಇಡೀ ಭರತಖಂಡವನ್ನೇ ತಮ್ಮ ಕೈವಶ ಮಾಡಿಕೊಳ್ಳಬೇಕೆಂದು ಹೊರಟಿದ್ದ ನಮಗೆ ಸಣ್ಣ ಸಂಸ್ಥಾನದ ಅದೂ ಒಬ್ಬ ಹೆಣ್ಣು ಮಗಳ ಕೈಯಲ್ಲಿ ಸೋಲನ್ನು ಅನುಭವಿಸಬೇಕಾಯಿತ್ತೆಂದು ಬ್ರಿಟಿಷ್ ಸರಕಾರ ಭಾವಿಸಿತು. ಅದಕ್ಕಾಗಿ ಕಿತ್ತೂರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಹಪಿಹಪಿಸತೊಡಗಿದರು. ಧಾರವಾಡದ ಕಮಿಶನರ್ ಚಾಪ್ಲಿನ್ ಲೆಫ್ಟನಂಟ್ ಕರ್ನಲ್ ಸಿ.ಬಿ.ಡೀಕನ್ ಸೇನಾಪತಿ ನೇತೃತ್ವದಲ್ಲಿ ಮುಂಬೈ ಯುರೋಪಿಯನ್ ಒಂದು ದಳ, ಮತ್ತು ಇಂಗ್ಲೆಂಡ್ ರಾಣಿಯ ಕುದುರೆ ಸವಾರರ ಎರಡು ದಳಗಳನ್ನೂ ಒಂದು ತೋಪು ದಳವನ್ನೂ ಮತ್ತು ೨೩ನೇ ಮದ್ರಾಸ್ ನೇಟಿವ್ಹ ದಳ ಮತ್ತು ಮುಂಬೈ ನೇಟಿವ್ ದಳ ಸಹಿತ ಸಜ್ಜಾಗಿ ಡಿಸೆಂಬರ್ ೧ ರಂದು ಪ್ರಚಂಡ ಸೈನ್ಯದೊಂದಿಗೆ ಕಿತ್ತೂರ ಮೇಲೆ ದಾಳಿ ಮಾಡಿದನು.

**ಒಳಗಿನ ಶತ್ರುಗಳಿಂದ ಯುದ್ಧ ವಿಫಲವಾಯಿತು:**

ಕಿತ್ತೂರು–ಆಂಗ್ಲೋ ಎರಡನೆಯ ಯುದ್ಧದಲ್ಲಿ ಚನ್ನಮ್ಮ ರಾಣಿಗೆ ಸೋಲಾಗಲು ಬ್ರಿಟಿಷರ ಕುತಂತ್ರ ಕಾರಣವಾದಂತೆ, ಸಂಸ್ಥಾನದ ಒಳಗಿದ್ದ ಮಲ್ಲಪ್ಪಶೆಟ್ಟಿ, ವೆಂಕಟರಾವ್ ಮತ್ತು ಗೆಜ್ಜೆ ಮಹಾಂತಮ್ಮ ಅವರಂಥ ದುಷ್ಟರೂ ಕಾರಣರು. ಅರಸರ ಮುಂದೆ ಗೆಜ್ಜೆ ಕಟ್ಟಿ ಕುಣಿಯುವ ಮನೆತನದಿಂದ ಬಂದ ಮಹಾಂತಮ್ಮನಿಗೆ 'ಗೆಜ್ಜೆ ಮಹಾಂತಮ್ಮ' ಎಂಬ ಹೆಸರು ಪ್ರಾಪ್ತವಾಗಿತ್ತು. ಅವಳು ಅಪ್ರತಿಮ ಚೆಲುವೆಯಾಗಿದ್ದಳು. ಶಿವಲಿಂಗರುದ್ರಸರ್ಜ ಪವಡಿಸುವ ಹಾಸಿಗೆಯನ್ನು ಸಜ್ಜುಗೊಳಿಸುವ ದಾಸಿಯ ವೃತ್ತಿಯಲ್ಲಿದ್ದಳು. ಅವಳ ಸೌಂದರ್ಯವನ್ನು ಒಮ್ಮೆ ಶಿವಲಿಂಗರುದ್ರಸರ್ಜ ನೋಡಿದ. ಅವಳಿಗಾಗಿ ಹಂಬಲಿಸಿದ. ರಾಜನಾದವನು ದಾಸಿಯ ಸಂಗ ಮಾಡುವುದು ಎಂಥ ಹೇಡಿತನ. ಹೀಗಿದ್ದೂ ಆತ ಅವಳನ್ನು ಬಯಸಿದ. ಅಂದಿನಿಂದ ದೊರೆ ದಾಸಿಯ ದಾಸನಾದ. ಅವಳು ಹೇಳಿದಂತೆ ಅವನು ಕೇಳತೊಡಗಿದ. ಅವನ ಹಸಿವುಗಳನ್ನು ಚಾಣಾಕ್ಷತೆಯಿಂದ ತೀರಿಸುವ ಕಾಯಕವನ್ನು ಮಹಾಂತಮ್ಮ ಕೈಕೊಂಡಳು. ಅವನಿಗೆ ನಿತ್ಯ ಊಟವನ್ನು ತಾನೇ ಬಡಿಸತೊಡಗಿದಳು. ಅಂದಿನ ಸಂಪ್ರದಾಯಶೀಲ ಸಮಾಜದಲ್ಲಿ ದೊರೆಯಾದವನಿಗೆ ತಾಯಿ ಅಥವಾ ಪತ್ನಿ ಊಟಕ್ಕೆ ನೀಡುತ್ತಿದ್ದಳು. ಆದರೆ



ಅವರಿಬ್ಬರನ್ನೂ ದೂರ ಸರಿಸಿ, ತಾನೆ ಊಟಕ್ಕೆ ನೀಡುವ ಹಂತಕ್ಕೆ ಮಹಾಂತಮ್ಮ ಬಂದು ಬಿಟ್ಟಳು.

ಸಂಸ್ಥಾನಗಳೆಂದರೆ ತಂತ್ರ–ಕುತಂತ್ರಗಳ ಕಾರಾಸ್ಥಾನಗಳು. ಯಾರು ಯಾವಾಗ ಯಾರ ಮೇಲೆ ದ್ವೇಷ ಸಾಧಿಸುತ್ತಾರೋ ಭಗವಂತನೇ ಬಲ್ಲ. ಇತಿಹಾಸದ ಅನೇಕ ಪ್ರಸಂಗಗಳನ್ನು ನೋಡಿದರೆ ಭಾರತದಲ್ಲಿದ್ದ ೫೬೫ ಸಂಸ್ಥಾನಗಳು ಹಾಳಾಗಲು ಇಂಥವೇ ಕಾರಣಗಳೆಂದೇನೂ ಇಲ್ಲ. ತಾಯಿ ಮಗನಿಗೆ ವಿಷಹಾಕಿದಳು, ಹೆಂಡತಿ ಗಂಡನಿಗೆ ವಿಷ ಹಾಕಿಕೊಂದಳು. ಮಲತಾಯಿಯೊಬ್ಬಳು ಮಗನನ್ನೇ ಕಾಮಸಂಗಕ್ಕೆ ಆಹ್ವಾನಿಸಿದಳು, ವಯಸ್ಸಾದ ರಾಜನಿಂದ ಸಿಗದ ಸುಖವನ್ನು ರಾಣಿ ಸಾಮಾನ್ಯ ಸೈನಿಕರಿಂದ ಪಡೆದದ್ದು ಇಂಥ ಅನೇಕ ರೋಚಕ ಘಟನೆಗಳು ಜರುಗಿರುವುದನ್ನು ಕಾಣುತ್ತೇವೆ.

ಮಹಾಂತಮ್ಮ ಸೌಂದರ್ಯವತಿಯಾದಂತೆ, ದುಷ್ಟಮನೋಧರ್ಮದವಳೂ ಆಗಿದ್ದಳು. ಶಿವಲಿಂಗರುದ್ರ ಸರ್ಜನ ತಮ್ಮ ಇವಳನ್ನು ವಿರೋಧಿಸಿದ. ಅಣ್ಣನನ್ನು ಒಬ್ಬ ಯಕಶ್ಚಿತ್ತ ದಾಸಿ ಹೀಗೆ ಆಟವಾಡಿಸುವುದೆಂದರೇನು? ಎಂದು ಆಕ್ಷೇಪಿಸಿದ. ಈ ಕಾರಣಕ್ಕಾಗಿ ಮಹಾಂತಮ್ಮ ಅವನಿಗೆ ವಿಷ ಹಾಕಿ ಕೊಂದು ಬಿಟ್ಟಳು. ತನ್ನ ವಿರುದ್ಧ ಯಾರೂ ಮಾತನಾಡದ ಸ್ಥಿತಿಯನ್ನು ನಿರ್ಮಾಣ ಮಾಡಿದಳು ಮಹಾಂತಮ್ಮ. ಸ್ವತಃ ಚೆನ್ನಮ್ಮನೇ ಇವಳ ಆಟಕ್ಕೆ ಅಂಜಿದ್ದಳು. ಅಮಟೂರ ಬಾಳಪ್ಪ, ಗುರುಸಿದ್ಧಪ್ಪ ಮೊದಲಾದ ಹಿರಿಯರನ್ನು ಕರೆದು ಈ ಕುರಿತು ಚೆನ್ನಮ್ಮ ಆಲೋಚಿಸಿದಳು. ಉಪಾಯವಾಗಿ ಅವಳನ್ನು ಅರಮನೆಯಿಂದ ದೂರಸರಿಸಬೇಕೆಂದು ನಿರ್ಣಯಿಸಿದರು.

ಶಿವಲಿಂಗರುದ್ರಸರ್ಜನಿಗೆ ಈ ಕುರಿತು ತಿಳಿವಳಿಕೆ ಹೇಳುವ ಪ್ರಯತ್ನ ಮಾಡಿದರು. ಒಡಹುಟ್ಟಿದ ತಮ್ಮನ ಸಾವಿಗೆ ಮಹಾಂತಮ್ಮನೇ ಕಾರಣವೆಂದು ತಿಳಿದಾಗ ಶಿವಲಿಂಗರುದ್ರಸರ್ಜ ಒಂದಿಷ್ಟು ಅಳುಕಿದ. ಇಂಥ ಹೆಂಗಸಿನ ಸಹವಾಸ ಮಾಡಿ ನಾನು ಕೆಟ್ಟೆ ಎಂದು ಪಶ್ಚಾತ್ತಾಪ ಪಟ್ಟ. ತನ್ನನ್ನು ಎಲ್ಲಿ ಮೋಸದಿಂದ ಕೊಲ್ಲುವಳೋ ಎಂದು ಹೆದರಿ ಅವಳನ್ನು ಸಂಸ್ಥಾನದಿಂದ ಹೊರದಬ್ಬಿದ.

ಅರಮನೆಯಿಂದ ಹೊರಬಂದ ಮಹಾಂತಮ್ಮ ಇನ್ನಷ್ಟು ಮೋಸ–ವಂಚನೆ ಮಾಡುವುದನ್ನು ಕಲಿತಳು. ಕಿತ್ತೂರು ಸಂಸ್ಥಾನವನ್ನೇ ಹಾಳು ಮಾಡುವ ಆಲೋಚನೆ ಮಾಡಿದಳು. ಆದರೆ ಅದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಸಂಸ್ಥಾನದ ನಿತ್ಯ ವರ್ತಮಾನಗಳನ್ನು ತಾನು ತಿಳಿದುಕೊಳ್ಳಬೇಕು. ಸಮಯ ಸಂದರ್ಭ ಬಂದಾಗ ಏನಾದರೂ ಕುತಂತ್ರ ಮಾಡಬೇಕೆಂದು ಆಲೋಚನೆ ಮಾಡುತ್ತಲೇ ಇದ್ದಳು. ಆಗ ಅವಳಿಗೆ ಸಿಕ್ಕ ದಾರಿ; ಅರಮನೆಯರೆಲ್ಲ ನಿಷ್ಠರಾಗಿದ್ದ ಗುರುಮನೆ ಕಡೆಗೆ. ಗುರುಮನೆ ಅಂದರೆ ಕಲ್ಮಠ. ಇಲ್ಲಿಗೆ ಬಂದು ಸ್ವಾಮಿಗಳ ಪಾದಕ್ಕೆ ಬಿದ್ದು 'ನಾನು ಮಠದಲ್ಲಿ ಕಸಗೂಡಿಸಿಕೊಂಡು ಬದುಕುವೆ ಗುರುವೆ; ಅವಕಾಶಕೊಡು' ಎಂದು ಬೇಡಿಕೊಂಡಳು. ಕಲ್ಮಠದ ಅಧಿಪತಿಯಾಗಿದ್ದ ಗುರುಸಿದ್ಧ ಸ್ವಾಮಿಯೂ ಶಿವಲಿಂಗರುದ್ರಸರ್ಜನ ಆತ್ಮೀಯನೇ ಆಗಿದ್ದ. ಆತ ಪೀಠಾಧಿಪತಿಯಾಗಿದ್ದೂ ಒಂದು ತಂತ್ರದಿಂದಲೇ. ಮಡಿವಾಳಪ್ಪ ಎಂಬ ಬಾಲ ಸನ್ಯಾಸಿ ಈ ಕಲ್ಮಠದ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದ. ಅವನಿಗೆ ಶಿವಲಿಂಗರುದ್ರ ಸರ್ಜ ಕಾಶಿಗೆ ಕಳಿಸಿಕೊಟ್ಟ. ಕಾಶಿಯಲ್ಲಿ ಅನೇಕ ಶಾಸ್ತ್ರಗಳನ್ನು ವ್ಯಾಸಂಗ ಮಾಡಿ ಮಡಿವಾಳಪ್ಪ ಉತ್ಸಾಹದಿಂದ ಕಿತ್ತೂರಿಗೆ ಮರಳಿ ಬಂದಾಗ ಅವನಿಗೊಂದು ಆಘಾತ ಕಾದಿತ್ತು. ತನ್ನ ಬದಲಾಗಿ; ಬೇರೊಬ್ಬನನ್ನು ಪೀಠಾಧಿಪತಿಯನ್ನಾಗಿ ಮಾಡಿದ್ದರು. ಇದರಿಂದ ಮಡಿವಾಳಪ್ಪನ ಸಿಟ್ಟು ನೆತ್ತಿಗೇರಿತು. ತನ್ನ ಅಧ್ಯಾತ್ಮವಿದ್ಯೆಯನ್ನೆಲ್ಲ ಪ್ರಯೋಗಿಸಿ ಸಂಸ್ಥಾನಕ್ಕೆ ಶಾಪ ಕೊಟ್ಟ. ಈ ಸಂಸ್ಥಾನ ನಿರ್ವಂಶವಾಗಲಿ. ಈ ಸಂಸ್ಥಾನ ಹಾಳಾಗಿ ಇಲ್ಲಿ ಕತ್ತೆಗಳು ವಾಸಿಸುವಂತಾಗಲಿ ಎಂದು ಶಪಿಸಿದ. ನಂತರ ಗರಗ ಗ್ರಾಮಕ್ಕೆ ಹೋಗಿ ತನ್ನ ಲಿಂಗಲೀಲಾ ವಿನೋದಗಳಿಂದ ಶ್ರೇಷ್ಠ ಪವಾಡಪುರುಷನೆನಿಸಿದ. ನವಲಗುಂದ ನಾಗಲಿಂಗ, ಗರಗದ ಮಡಿವಾಳಪ್ಪ, ಶಿಶುನಾಳ ಶರೀಫರು ಮೂವರು ಗೆಳೆಯರಾಗಿ ಈ ನಾಡಿನಲ್ಲಿ ಅಧ್ಯಾತ್ಮದ ಬೆಳಕನ್ನು ಪಸರಿಸಿದರು.

ಸಂಸ್ಥಾನದ ಅನೇಕ ಗುಪ್ತ ವಿಚಾರಗಳನ್ನು ಕಲ್ಮಠದ ಒಳಗಿರುವ ಸುರಂಗ ಕೋಣೆಯಲ್ಲಿ ಚರ್ಚಿಸಲಾಗುತ್ತಿತ್ತು. ಈ ವಿಷಯ ಮಹಾಂತಮ್ಮನಿಗೆ ಗೊತ್ತಿತ್ತು. ಹೀಗಾಗಿ ಗುರುಮನೆಯಲ್ಲಿದ್ದರೆ ಅರಮನೆಯ ಎಲ್ಲ ಸಂಗತಿಗಳು ತನಗೆ ಗೊತ್ತಾಗುತ್ತವೆ ಎಂದು ಅವಳು ಅರಿತುಕೊಂಡಿದ್ದಳು.



ಇದೇ ಸಂದರ್ಭದಲ್ಲಿ ದತ್ತಕ ವಿಷಯವಾಗಿ ಬ್ರಿಟಿಷ್ ಅಧಿಕಾರಿಗಳಿಗೂ ಸಂಸ್ಥಾನಕ್ಕೂ ಒಳಜಗಳಗಳು ನಡೆದಿದ್ದವು.

ಮೊದಲ ಸಲ ಥ್ಯಾಕರೆ ಸಣ್ಣ ಸೈನ್ಯದೊಂದಿಗೆ ಬಂದು ಚೆನ್ನಮ್ಮನೊಂದಿಗೆ ಹೋರಾಡಿದ. ಈ ಸಂದರ್ಭದಲ್ಲಿ ಥ್ಯಾಕರೆ ಸತ್ತ. ಕಿತ್ತೂರು ಜನ ವಿಜಯೋತ್ಸವ ಆಚರಿಸಿದರು. ಆದರೆ ಥ್ಯಾಕರೆ ಸಾವಿನಿಂದ ರೊಚ್ಚಿಗೆದ್ದ ಬ್ರಿಟಿಷ್ ಅಧಿಕಾರಿಗಳು ಬೃಹತ್ ಸೈನ್ಯದೊಂದಿಗೆ ಕಿತ್ತೂರು ಮೇಲೆ ದಾಳಿ ಮಾಡಲು ನಿರ್ಧರಿಸಿದರು. ಈ ವಿಷಯ ತಿಳಿದ ಚೆನ್ನಮ್ಮ ಯುದ್ಧಕ್ಕೆ ಬೇಕಾದ ತಯಾರಿ ಬಗ್ಗೆ ಕಲ್ಮಠದ ಗುಪ್ತಕೋಣೆಯಲ್ಲಿ ವಿವರವಾಗಿ ಚರ್ಚಿಸಿದಳು. ಯುದ್ಧ ಸಂದರ್ಭದಲ್ಲಿ ಅಶ್ವದಳ, ಗಜದಳ, ಪದಾತಿದಳಗಳ ಜೊತೆಗೆ ಆಧುನಿಕ ಯುದ್ಧ ಸಾಮಗ್ರಿ ಹೊಂದಿದ ಬ್ರಿಟಿಷರೊಂದಿಗೆ ಯುದ್ಧಮಾಡುವುದು ಅಷ್ಟು ಸುಲಭವಲ್ಲ ಎಂಬ ಅರಿವು ಚೆನ್ನಮ್ಮಳಿಗಿತ್ತು. ಆ ಕಾರಣಕ್ಕಾಗಿ ಅವಳು ಮದ್ದುಗುಂಡಗಳನ್ನು ಸಿಡಿಸುವ ಯೋಚನೆಯನ್ನು ಮಾಡಿದಳು.

ಅಪಾರ ಪ್ರಮಾಣದಲ್ಲಿ ಮದ್ದುಗುಂಡುಗಳನ್ನು ಸಿದ್ಧಪಡಿಸಿ, ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ತುಂಬಿ ಸಿದ್ಧವಾಗಿಟ್ಟುಕೊಂಡರು. ಮದ್ದುಗುಂಡುಗಳಿಂದಲೇ ಬ್ರಿಟಿಷ್ ಸೈನ್ಯವನ್ನು ನಿರ್ನಾಮ ಮಾಡುವಷ್ಟು ತಯಾರಿ ನಡೆಸಿದಳು ಚೆನ್ನಮ್ಮ. ಮದ್ದುಗುಂಡುಗಳ ಸಂಗ್ರಹದ ವಿಷಯ ಮಹಾಂತಮ್ಮಳಿಗೆ ತಿಳಿಯಿತು.

ಬ್ರಿಟಿಷ್ ಅಧಿಕಾರಿಗಳು ಕೆಲವು ಗುಪ್ತಚರರನ್ನು ನೇಮಿಸಿದ್ದರು. ಯಾರಾದರು ಸಂಸ್ಥಾನದ ವಿರುದ್ಧ ಮಾತನಾಡುವರು ಸಿಗುತ್ತಾರೆಯೇ ಎಂದು ಗುಪ್ತಚರರು ಕಾದು ನೋಡುತ್ತಿದ್ದರು. ಅವರಿಗೆ ಸಿಕ್ಕವಳು ಈ ಮಹಾಂತಮ್ಮ. ಅವಳಿಗೆ ಸಂಸ್ಥಾನದ ಬಗ್ಗೆ ಇದ್ದ ಸಿಟ್ಟನ್ನು–ದ್ವೇಷವನ್ನು ತಮ್ಮ ಸಮಯ ಸಾಧಕತನಕ್ಕೆ ಉಪಯೋಗಿಸಿಕೊಳ್ಳಬೇಕೆಂದು ಗುಪ್ತಚರರು ನಿರ್ಧರಿಸಿ, ಬ್ರಿಟಿಷ್ ಅಧಿಕಾರಿಗಳಿಗೆ ಈ ಕುರಿತು ವರದಿ ಸಲ್ಲಿಸಿದರು.

ಬ್ರಿಟಿಷ್ ಅಧಿಕಾರಿಗಳು ಮಹಾಂತಮ್ಮಳನ್ನು ಉಪಾಯವಾಗಿ ಧಾರವಾಡಕ್ಕೆ ಕರೆಸಿಕೊಂಡರು. ಅವಳಿಗೆ ಹಣದ ಆಮಿಷ ಒಡ್ಡಿದರು. ಹೇಗಾದರೂ ಮಾಡಿ, ಮದ್ದುಗುಂಡುಗಳು ಸ್ಫೋಟಗೊಳ್ಳದಂತೆ ನೋಡಿಕೊಳ್ಳಬೇಕೆಂದು ಅವಳಲ್ಲಿ

ಕೇಳಿಕೊಂಡರು. ಸಂಸ್ಥಾನದಿಂದ ಹೊರದಬ್ಬಿಸಿಕೊಂಡಿದ್ದ ಮಹಾಂತಮ್ಮಳಿಗೆ ಅಧಿಕಾರಿಗಳ ವಿನಂತಿ ಹುಚ್ಚೆಬ್ಬಿಸಿತು. ಸಂಸ್ಥಾನವನ್ನು ಹಾಳು ಮಾಡಲು ಇದಕ್ಕಿಂತ ಬೇರೆ ಅವಕಾಶ ನನಗೆ ದೊರೆಯುವುದಿಲ್ಲವೆಂದು ಅವಳು ಭಾವಿಸಿದಳು.

ಕಲ್ಮಠದ ಗುಪ್ತಕೋಣೆಯಲ್ಲಿ ಯುದ್ಧಾರಂಭದ ಮುನ್ನಾದಿನ ಅನೇಕ ಚರ್ಚೆಗಳು ನಡೆದವು. ಆ ಚರ್ಚೆಯ ವಿವರಗಳೆಲ್ಲ ಮಹಾಂತಮ್ಮಳಿಗೆ ಗೊತ್ತಾದವು. ಮದ್ದುಗುಂಡುಗಳನ್ನು ಸಂಗ್ರಹಿಸಿದ ಜಾಗೆಯನ್ನು ಗುರುತು ಮಾಡಿಕೊಂಡಳು. ಅಂದೇ ಸಾಯಂಕಾಲ ಕಿತ್ತೂರಿನ ಬೀದಿ ಬೀದಿಗಳಲ್ಲಿ ತಿರುಗಿ ದನಕರುಗಳ ಸೆಗಣಿಯನ್ನು ಸಂಗ್ರಹಿಸಿದಳು. ಮದ್ದುಗುಂಡುಗಳನ್ನು ತುಂಬಿಸಿದ್ದ ತೋಪುಗಳನ್ನು ಮೊದಲು ಮಾಡಿಕೊಂಡು ಎಲ್ಲ ಪೆಟ್ಟಿಗೆಗಳಲ್ಲಿ ಸೆಗಣಿ ನೀರನ್ನು ಸುರುವಿದಳು. ಮದ್ದುಗುಂಡುಗಳೆಲ್ಲ ತಣ್ಣಗಾದವು.

ಮರುದಿನ ಯುದ್ಧ ಆರಂಭವಾಯಿತು. ಚೆನ್ನಮ್ಮ ಕೂಡ ಕುದುರೆ ಏರಿ ಯುದ್ಧರಂಗ ಪ್ರವೇಶಿಸಿದಳು. ಅವಳಿಗೆ ಸಹಾಯಕರಾಗಿ ಅಮಟೂರು ಬಾಳಪ್ಪ, ಗುರುಸಿದ್ಧಪ್ಪ ಮೊದಲಾದವರು ಮುನ್ನುಗ್ಗಿದರು. ಚೆನ್ನಮ್ಮಳ ಖಡ್ಗದಿಂದ ರಕ್ತದ ಧಾರೆಯೇ ಹರಿಯಿತು. ಬ್ರಿಟಿಷ್ ಸೈನ್ಯವನ್ನು ಚೆಂದಿ ಚೆಂದಿ ಮಾಡಿದಳು. ಇದರಿಂದ ಕಂಗಾಲಾದ ಬ್ರಿಟಿಷ್ ಸೈನಿಕರು ಮದ್ದುಗುಂಡುಗಳನ್ನು ಹಾರಿಸುವತ್ತ ಗಮನ ಹರಿಸಿದರು. ಇದನ್ನು ನೋಡಿದ ತಕ್ಷಣ ಚೆನ್ನಮ್ಮ ಕೂಡ ತಮ್ಮ ಆಪ್ತರಿಗೆ ಮದ್ದುಗುಂಡುಗಳನ್ನು ಹಾರಿಸಲು ಸೂಚನೆ ನೀಡಿದಳು.

ಚೆನ್ನಮ್ಮಳ ದುರ್ದೈವವೋ ಏನೋ ಒಂದು ಮದ್ದುಗುಂಡು ಕೂಡ ಸ್ಫೋಟಗೊಳ್ಳಲಿಲ್ಲ. ಎಲ್ಲ ಮದ್ದುಗುಂಡುಗಳು ಸಗಣಿ ನೀರಿನಿಂದ ತೋಯ್ದು ತಣ್ಣಗಾಗಿದ್ದವು. ಮದ್ದುಗುಂಡುಗಳು ಹೀಗೆ ಠುಸ್ಸಾದ ವಿಷಯ ಕೇಳುತ್ತಲೇ ಚೆನ್ನಮ್ಮನ ಧೈರ್ಯವೇ ಅಡಗಿ ಹೋಯಿತು. ಎಂಥಾ ಪರಿಸ್ಥಿತಿ ಬಂತು ಎಂದು ಆಲೋಚಿಸಿದಳು. ಮದ್ದುಗುಂಡುಗಳು ಹೀಗೆ ತಣ್ಣಗಾಗಲು ಏನು ಕಾರಣವೆಂದು ತಿಳಿಯಲು ಅಮಟೂರ ಬಾಳಪ್ಪನನ್ನು ಕಳಿಸಿಕೊಟ್ಟಳು. ಬಾಳಪ್ಪ ಸಂಸ್ಥಾನದ ಗುಪ್ತಚರರಿಂದ ವರದಿ ತಂದ. ಸಂಸ್ಥಾನದಿಂದ ಹೊರಹೋದ ಮಹಾಂತಮ್ಮಳೇ ಇದಕ್ಕೆಲ್ಲ ಕಾರಣವೆಂದು ತಿಳಿಯಿತು.



ಮಹಾಂತಮ್ಮ ವಿಕಟ ನಗೆ ಬೀರಿದಳು. ಅಷ್ಟರಲ್ಲಿ ಚೆನ್ನಮ್ಮ ಗೃಹಬಂಧಿಯಾದಳು. ಬೈಲಹೊಂಗಲದಲ್ಲಿ ಚನ್ನಮ್ಮ ತನ್ನ ಅಂತಿಮ ದಿನಗಳನ್ನು ಕಳೆದಳು. ಅನೇಕ ಶೂರ ಸೈನಿಕರು ಪ್ರಾಣತೆತ್ತರು. ಕಿತ್ತೂರು ಸಂಸ್ಥಾನ ಆಂಗ್ಲರ ಆಧೀನವಾಯಿತು. ಗೆಜ್ಜಿ ಮಹಾಂತಮ್ಮ, ಮಲ್ಲಪ್ಪಶೆಟ್ಟಿ, ವೆಂಕಟರಾವ್ ಈ ಮೂವರು ಕೂಡಿ ಮಾಡಿದ ಕುತಂತ್ರ ಕಾರಣವಾಗಿ ಕಿತ್ತೂರು ಅರಸೊತ್ತಿಗೆ ಹೇಳಹೆಸರಿಲ್ಲದಂತೆ ಕಾಲಗರ್ಭದಲ್ಲಿ ಅಡಗಿತು.

ಕಿತ್ತೂರು ಅರಮನೆ ಅತ್ಯಂತ ಸುಂದರವಾಗಿತ್ತು. ಅದರ ವಾಸ್ತುಶಿಲ್ಪ ಕಟ್ಟಡ ರಚನಾ ವೈಶಿಷ್ಟ್ಯ ತುಂಬ ಆಕರ್ಷಕವಾಗಿತ್ತು. ಈ ಅರಮನೆಯನ್ನು ಹಾಗೆ ಬಿಟ್ಟರೆ, ಕಿತ್ತೂರಿನ ಜನತೆಗೆ ತಮ್ಮ ಸಂಸ್ಥಾನದ ನೆನಪು ಮರಳಿ ಬಂದು, ಬ್ರಿಟಿಷ್ ಸರಕಾರದ ವಿರುದ್ಧ ಅವರು ದಂಗೆ ಏಳಬಾರದೆಂದು ತಿಂಗಳುಗಟ್ಟಲೆ ಈ ಭವ್ಯ ಅರಮನೆಯನ್ನು ನೆಲಸಮ ಮಾಡಲು ಪ್ರಯತ್ನಿಸಿದರು.

* * *

ಕಿತ್ತೂರು ಸಂಸ್ಥಾನದ ಕೊನೆಯ ದೊರೆ ಶಿವಲಿಂಗರುದ್ರಸರ್ಜನ ಮರಣಾನಂತರ ಆ ಸಂಸ್ಥಾನ ಅವನತಿಯತ್ತ ಸಾಗಿತು. ಶಿವಲಿಂಗರುದ್ರಸರ್ಜ ತನ್ನ ಜೀವಿತದ ಕೊನೆಯ ಗಳಿಗೆಯಲ್ಲಿ ತೆಗೆದುಕೊಂಡ ದತ್ತಕವನ್ನು ಬ್ರಿಟಿಷರು ಒಪ್ಪಿಲಿಲ್ಲ. ಕಿತ್ತೂರನ್ನು ಕೈವಶ ಮಾಡಿಕೊಳ್ಳಲು ಈ ಸಂದರ್ಭವನ್ನು ಅವರು ಯಶಸ್ವಿಯಾಗಿ ಬಳಸಿಕೊಂಡರು. ಅಂತೂ ಕಿತ್ತೂರು ಪತನವಾಯಿತು. ಶಿವಲಿಂಗರುದ್ರಸರ್ಜನ ವಿಧವಾ ಪತ್ನಿ ಈರವ್ವ (ವೀರಮ್ಮ) ಮತ್ತು ಅವನ ಮಲತಾಯಿ ಚನ್ನಮ್ಮನನ್ನು ಬೈಲಹೊಂಗಲದಲ್ಲಿ ಗೃಹಬಂಧನದಲ್ಲಿಡಲಾಯ್ತು. ಸಂಗೊಳ್ಳಿರಾಯಣ್ಣನಂಥ ಬಂಡುಕೋರರಿಗೆ ಈರವ್ವ ಗುಪ್ತನೆರವು ನೀಡುತ್ತಿದ್ದಾಳೆಂಬ ಆರೋಪದ ಮೇಲೆ ಅವಳನ್ನು ಬೈಲಹೊಂಗಲದಿಂದ ಸ್ಥಳಾಂತರಿಸಲಾಯಿತು. ಅವಳು ಧಾರವಾಡದಲ್ಲಿ ನಿಧನಳಾದಳು. ಇದಷ್ಟು ವಿಷಯ ಇತಿಹಾಸದಲ್ಲಿ ಹೇಗೆ ದಾಖಲಾಗಿದೆ, ಜಾನಪದದಲ್ಲಿ ಹೇಗೆ ದಾಖಲಾಗಿದೆ ಎಂಬುದನ್ನು ಪರಿಶೀಲಿಸಬೇಕು.

ಐತಿಹಾಸಿಕ ದಾಖಲೆಗಳು ಈರವ್ವನ ಬಗ್ಗೆ ಸಂಕ್ಷಿಪ್ತವಾದ ಖಚಿತವಾದ ವಿವರ ಗಳನ್ನು ನೀಡುತ್ತವೆ. ಶಿವಲಿಂಗರುದ್ರಸರ್ಜ ತೀರಿಕೊಂಡಾಗ

(೧೨–೯–೧೮೨೪ ಈರವ್ವಳಿಗೆ ಹನ್ನೊಂದು ವರ್ಷ ದತ್ತಕ ಒಪ್ಪದ್ದರಿಂದ ಈರವ್ವನೇ ಕಿತ್ತೂರಿನ ವಾರಸುದಾರಳು. ಇವಳು ಹೆಸರಿಗೆ ಮಾತ್ರ ವಾರಸುದಾರಳಾಗಿದ್ದಳು. ಆಡಳಿತವನ್ನೆಲ್ಲ ಚನ್ನಮ್ಮ ನೋಡಿ ಕೊಳ್ಳುತ್ತಿದ್ದಳು. ಥ್ಯಾಕರೇನ ಕಾಟ ತಾಳಿಕೊಳ್ಳಲಾರದೆ ಈರವ್ವನೊಂದಿಗೆ ಪುಣೆ ಮುಂಬೈಗಳಿಗೆ ಹೋಗಿ ವಾಸಿಸಬೇಕೆಂದು ಚೆನ್ನಮ್ಮ ಅಪೇಕ್ಷಿಸಿದ್ದಳು. ಆದರೆ ಬ್ರಿಟಿಷರು ಒಪ್ಪಿಗೆ ನೀಡಲಿಲ್ಲ. ಚನ್ನಮ್ಮ–ವೀರಮ್ಮನವರಲ್ಲಿ ಮನಸ್ತಾಪ ಹುಟ್ಟಿಸಲು ಥ್ಯಾಕರೆ ವಿಫಲ ಪ್ರಯತ್ನ ನಡೆಸಿದ. ತಾನು ತಾಯಿಯೆಂದು ನಂಬಿದ್ದ ಚೆನ್ನಮ್ಮನ ಮೇಲಿನ ನಂಬಿಕೆಯನ್ನು ವೀರಮ್ಮ ಕಳೆದುಕೊಳ್ಳಲಿಲ್ಲ. ಶಿವಲಿಂಗ ರುದ್ರಸರ್ಜನ ಮರಣದಿಂದ ಕಿತ್ತೂರು ಪತನದವರೆಗಿನ ಎಂಬತ್ತು ನಾಲ್ಕು ದಿನಗಳ ಅವಧಿಯಲ್ಲಿ ಕಿತ್ತೂರು ಮತ್ತು ಬ್ರಿಟಿಷರ ನಡುವೆ ಪತ್ರವ್ಯವಹಾರ ನಿರಂತರವಾಗಿ ನಡೆಯಿತು. ಈ ಪತ್ರಗಳಲ್ಲಿ ಬೆರಳೆಣಿಕೆಯಷ್ಟು ಪತ್ರಗಳು ಚೆನ್ನಮ್ಮ ಮತ್ತು ಈರವ್ವ ಜಂಟಿಯಾಗಿ ಬರೆದಂಥವು. ಉಳಿದ ಬಹುಸಂಖ್ಯೆಯ ಪತ್ರಗಳಲ್ಲಿ ಈರವ್ವನ ಪ್ರಸ್ತಾಪವಿಲ್ಲ. ಅಪ್ರಾಪ್ತ ವಯಸ್ಕಳಾದ ಈರವ್ವ, ಚೆನ್ನಮ್ಮಳಿಗೆ ಎಲ್ಲ ಒಪ್ಪಿಸಿ ನಿರ್ಲಿಪ್ತಳಾಗಿದ್ದುದು ಸಹಜವಾಗಿದೆ. ಕಿತ್ತೂರು ಎರಡನೇ ಯುದ್ಧದಲ್ಲಿ ಸಂಪೂರ್ಣವಾಗಿ ಸೋತ ಮೇಲೆ ಚೆನ್ನಮ್ಮ–ಈರವ್ವ ಕೋಟೆಯ ಈಶಾನ್ಯ ಭಾಗದಿಂದ ತಪ್ಪಿಸಿಕೊಂಡು ಹೋಗುವಾಗ ಬ್ರಿಟಿಷರಿಗೆ ಸೆರೆ ಸಿಕ್ಕರು. ಇಬ್ಬರನ್ನು ಗೃಹಬಂಧನದಲ್ಲಿ ಇಡಲಾಯಿತು. ಈ ರಾಜಕೀಯ ಕೈದಿಗಳಿಗೆ ೪೦ ಸಾವಿರ ರೂ. ನಿವೃತ್ತಿ ವೇತನ ದೊರೆಯುತ್ತಿತ್ತು. ಚೆನ್ನಮ್ಮನ ನಿಧನಾನಂತರ ಈರವ್ವನನ್ನು ಕುಸುಗಲ್ಲಿಗೆ–ನಂತರ ಧಾರವಾಡಕ್ಕೆ (೧೭–೨–೧೮೩೦) ಸ್ಥಳಾಂತರಿಸಲಾಯಿತು. ಅವಳು ಬಂಡಾಯಗಾರ ಸಂಗೊಳ್ಳಿ ರಾಯಣ್ಣನಿಗೆ ಗುಪ್ತವಾಗಿ ನೆರವು–ಪ್ರೇರಣೆ ನೀಡುತ್ತಿದ್ದಾಲೆಂಬ ಸುಳಿವು ಬ್ರಿಟಿಷರಿಗೆ ಸಿಕ್ಕದ್ದೇ ಈ ಸ್ಥಳಾಂತರಕ್ಕೆ ಕಾರಣವಾಯಿತು. ಜನರ ಪ್ರೀತಿ–ಅನುಕಂಪ ಗಳಿಸಿದ್ದ ಈರವ್ವನ ಸ್ಥಳಾಂತರವನ್ನು ನಾಗರಿಕರು ಪ್ರತಿಭಟಿಸಿದರು. ಬೈಲಹೊಂಗಲ ಸಮೀಪದ ಅಮಿಗೋಳದಲ್ಲಿ ಸಾವಿರಾರು ಜನ ಪ್ರತಿಭಟನಾಕಾರರು ಸೇರಿದ್ದಾಗಿಯೂ ಈರವ್ವನ ಕಾವಲಿಗಿದ್ದ ದೊಡ್ಡ ಸೈನ್ಯವನ್ನು ಕಂಡು ಹಿಂದೆ ಸರಿದರೆಂದೂ ಸ್ಟೋಕ್ಸ್ ಎಂಬ ಅಧಿಕಾರಿ ಬರೆದಿದ್ದಾನೆ. ಈರವ್ವ ಅನಾರೋಗ್ಯದಿಂದ ೧೩–೭–೧೮೩೦ರಂದು ಧಾರವಾಡದಲ್ಲಿ



ನಿಧನಳಾದಳು. ಸ್ತ್ರೀಯರಿಗೇ ವಿಶಿಷ್ಟವಾದ ಗುಪ್ತರೋಗವೊಂದು ಅವಳ ಸಾವಿಗೆ ಕಾರಣವಾಯಿತೆಂದು ಬ್ರಿಟಿಷ್ ದಾಖಲೆಗಳು ತಿಳಿಸುತ್ತವೆ (ನಿಸ್ಬತ್‌ನ ಪತ್ರ).

ಒಟ್ಟಾರೆ, ಕಿತ್ತೂರಿನ ಚರಿತ್ರೆಯಲ್ಲಿ ಈರವ್ವನದು ಕಡಿಮೆ ಪಾತ್ರ. ಅವಳು ಇತಿಹಾಸದಲ್ಲಿ ಕಾಣಿಸಿಕೊಂಡ ಸಂದರ್ಭದಲ್ಲಿ ಚನ್ನಮ್ಮ ಪ್ರಧಾನ ವ್ಯಕ್ತಿಯಾಗಿ ಕಂಗೊಳಿಸಿದ್ದಕ್ಕೆ ಕಾರಣ ಚನ್ನಮ್ಮನ ಚಾಣಾಕ್ಷತನ ಧೈರ್ಯ ಹೋರಾಟದ ಮನೋಭಾವಗಳು. ಮುಗ್ಧಳೂ ಅಸಹಾಯಕಳೂ ಆಗಿದ್ದ ಈರವ್ವ ತೆರೆಮರೆಯಲ್ಲಿ ಉಳಿದುದು ಇತಿಹಾಸಕ್ಕೆ ಅಚ್ಚರಿಯ ಸಂಗತಿಯಲ್ಲ. ಆದರೆ ಅಂದಿನ ಜನಪದ ಈರವ್ವನ ಬಗ್ಗೆ ತೋರಿಸಿದ ಪ್ರೀತಿ ಅನುಕಂಪಗಳು ಅಪಾರ. ಅಧಿಕೃತ ವಾರಸುದಾರಳಾಗಿದ್ದಳೂ ಅನಾಥಳಾದ, ಹನ್ನೊಂದನೇ ವಯಸ್ಸಿಗೇ ವಿಧವೆಯಾದ ದಾಂಪತ್ಯ ಸುಖದಿಂದ ವಂಚಿತಳಾದ ಈರವ್ವ ಜನಸಾಮಾನ್ಯರ ಅನುಕಂಪಗಳಿಸಿದ್ದು ಸಹಜವಾಗಿದೆ. ಶಿವಲಿಂಗರುದ್ರಸರ್ಜನನ ಸಹೋದರನೊಬ್ಬ ಅವನಿಗಿಂತ ಮೊದಲೇ ತೀರಿಕೊಂಡಿದ್ದ. ಅವನ ಪತ್ನಿ ಜಾನಕಿಬಾಯಿ ತಾರುಣ್ಯದಲ್ಲಿಯೇ ವಿಧವೆಯಾದಳು. ಅವಳ ಬಗ್ಗೆಯೂ ಅನುಕಂಪ ಅಪೇಕ್ಷಿತವಾಗಿತ್ತು. ಆದರೆ ಅದು ಕಂಡು ಬರುವುದಿಲ್ಲ. ಇತಿಹಾಸದ ಪುಟಗಳಲ್ಲಿ ರೇಖಾಚಿತ್ರವಾಗಿ ಉಳಿದಿರುವ ಈರವ್ವನನ್ನು ಜನಪದರು ತುಂಬಾ ಹಚ್ಚಿಕೊಂಡಿದ್ದಾರೆ. ಅವಳ ಅಳಲನ್ನು ದುಃಸ್ಥಿತಿಯನ್ನು ಕಂಡು ಮಮ್ಮಲ ಮರಗಿದ್ದಾರೆ. ತಮ್ಮ ಪ್ರತಿಕ್ರಿಯೆ ಮತ್ತು ಅನುಕಂಪಗಳನ್ನಾಧರಿಸಿ ಈರವ್ವನ ವರ್ಣರಂಜಿತ ಚಿತ್ರ ಬಿಡಿಸಿದ್ದಾರೆ. ಜನಪದರು ಬಿಡಿಸಿರುವ ಈ ಚಿತ್ರ ಅನೇಕ ಹಾಡುಗಳಲ್ಲಿ ಮೂಡಿನಿಂತಿದೆ. ಇತಿಹಾಸದ ದಾಖಲೆಗಳು ತಿಳಿಸಿದ ಅಥವಾ ಅಲಕ್ಷಿಸಿರುವ ಬಹಳಷ್ಟು ಅಂಶಗಳು ಜನಪದರ ಹಾಡುಗಳಲ್ಲಿ ವ್ಯಕ್ತವಾಗಿವೆ. ಕೆಲವು ಅಭಿಪ್ರಾಯಗಳೂ ಐತಿಹಾಸಿಕ ಅಂಶಗಳನ್ನು ಸಮರ್ಥಿಸುವಂತಿವೆ, ಅವುಗಳಿಗೆ ಪೂರಕವಾಗಿವೆ. ಇನ್ನು ಕೆಲವು ಇತಿಹಾಸಕ್ಕೆ ತದ್ವಿರುದ್ಧವಾಗಿವೆ.

ಬ್ರಿಟಿಷರ ಸೆರೆಯಾಳುಗಳಾಗಿ ಚನ್ನಮ್ಮ ಈರವ್ವ ಕಿತ್ತೂರು ಬಿಟ್ಟು ಹೊರಟದ್ದು ಎಂಥ ನೋವಿನ ಅಪಮಾನದ ಅಸಹಾಯಕ ಸ್ಥಿತಿ? ಆಗ ಚನ್ನಮ್ಮ ಹೇಳುತ್ತಾಳೆ–"ಈರವ್ವನ ಸುಡಗಾಡಕ ದಾರಿ ಎರದಂಗಾತು" ಅವಳ ದುಃಸ್ಥಿತಿಯನ್ನು ಕಂಡು ಮರುಗಿದ ಜೀವ,

**ಕಂದನ್ನ ಹಡಿಲಿಲ್ಲ ಕೈಬೀಸಿ ನಡಿಲಿಲ್ಲ**
**ಗಂಡನ ಪುಣ್ಯ ಉಣಲಿಲ್ಲ । ಈರವ್ವ**
**ರಂಡಿತನ ನಿನಗೆ ಮೂಲಾತೊ**

–ಎಂದು ಹಾಡಿದೆ. ರಾಯಣ್ಣನ ಬಂಡಾಯಕ್ಕೆ ಈರವ್ವ ನೆರವು ನೀಡಿದುದನ್ನು ಜನಪದರು ಹೀಗೆ ಸ್ಮರಿಸಿಕೊಂಡಿದ್ದಾರೆ:

**ಮುಕ್ಕಣ್ಣ ಗತಿಯೆಂದು ಸಿಕ್ಕು ಸೆರೆಯಾಗಿದ್ದು**
**ಬಿಕ್ಕಿ ಅಳತಾಳ ಈರವ್ವ । ರಾಯಣ್ಣ**
**ಅಕ್ಕ ನಿಮ್ಮುಪ್ಪ ಈ ರಾಯ**

ಸೆರೆಯಲ್ಲಿದ್ದು ತನ್ನ ದುಸ್ಥಿತಿಗಾಗಿ ವ್ಯಥೆ ಪಡುತ್ತಿದ್ದ ಈರವ್ವನನ್ನು ರಾಯಣ್ಣ ಸಮಾಧಾನ ಪಡಿಸಿರುವುದರ ಚಿತ್ರಣ ಇಲ್ಲಿದೆ.

ಈರವ್ವನನ್ನು ಚನ್ನಮ್ಮನಿಂದ ಅಗಲಿಸಿ ಹೊಂಗಲದಿಂದ ಕುಸುಗಲ್ಲಿಗೆ ಒಯ್ದು ಘಟನೆ ಜನಪದರ ಮನಸ್ಸನ್ನು ಕಲಕಿದೆ. ಅಸಹಾಯಕ ಸ್ಥಿತಿಯಲ್ಲಿದ್ದ ಅವಳನ್ನು ಒತ್ತಾಯದಿಂದ ಬೇರೆಕಡೆ ಸಾಗಿಸಿದ್ದು ಜನರ ದೃಷ್ಟಿಯಲ್ಲಿ ಅಮಾನವೀಯ ಕೃತ್ಯವೆನಿಸಿದೆ. ಅದಕ್ಕಾಗಿ ಇಡೀ ನಾಡು ಮರುಗಿದೆ. ದುಃಖ ಸಿಟ್ಟು ಅಸಹಾಯಕತೆಯಿಂದ ಮರುಗಿದ ಸಮುದಾಯ.

**ಕಂಚಿನ ಹರಿವಾಣದಾಗ ಮಿಂಚ ಮುತ್ತ ಸುರಿವಿದ್ಹಾಂಗ**
**ನಿಂತಿರುವ ಗ್ವಾಡಿ ಬಿರಿಯಲಿ । ಈರವನ**
**ಒಯಿದವರ ಓಸ ಹುರಿಯಲಿ**

–ಎಂದು ಶಾಪ ನೀಡಿದೆ. 'ಓಸ' ಎಂದರೆ ವಂಶ ಹಾಳಾಗಲಿ ಎಂಬ ಭಾವ ಇಲ್ಲಿದೆ. 'ಈರವ್ವ ಹೊಂಗಲ ಬಿಟ್ಟು ಹೋಗುವಾಗ, ನಿಂತವರು ಜನರು ಅಳತಾರವ್ವ' 'ಕಿತ್ತೂರ ಚೆನ್ನವ್ವನ ಸೊಸಿ' ಎಂಬ ಲಾವಣಿ ಒಂದು ಮಹತ್ವದ ದಾಖಲೆಯಾಗಿದೆ. ಇದರ ಕರ್ತೃ ಹೆಬ್ಬಳ್ಳಿ ಬಸವ. ಅಂದಿನ ಘಟನೆಯನ್ನು ಸ್ವತಃ ಕಂಡವನಾಗಿರಬೇಕು.



**ಕಿತ್ತೂರ ಚನ್ನಮ್ಮನ ಸೊಸಿ ಹೊಂಗಲ ಬಿಟ್ಟ ಹೋಗುವಾಗ**
**ಮಾಡಲಿದ್ದಳಣ್ಣ ಮಹದುಃಖ**
**ಮತ್ತ ನಮ್ಮ ಮಲಸರ್ಜ ಸತ್ತು ಹೋಗದಿದ್ದರ**
**ಹೊತ್ತು ಹೋಗುದ್ಯಾಕ ನಮ ಬದಕಾ**

ಎಂದು ಪ್ರಾರಂಭವಾಗುವ ಲಾವಣಿ, ಈರವ್ವನ ಮೂಲಕ ಕಿತ್ತೂರ ಅವನತಿಯನ್ನು ಸ್ಮರಿಸಿಕೊಳ್ಳುವ ಕ್ರಮದಲ್ಲಿದೆ. ಸಮಕಾಲೀನ ಜನಪದ ಸಮುದಾಯವನ್ನು ಕಾಡಿದ ಈರವ್ವನ ಸ್ಥಳಾಂತರ ಲಾವಣಿಕಾರನನ್ನೂ ಕೆದಕಿದೆ. ಅವಳು ತನ್ನ ಕಿತ್ತೂರಿನ ಗತವೈಭವ ನೆನೆದು ಕಣ್ಣೀರಿಡುತ್ತಾಳೆ. ರಾಜ್ಯದ ಸಂಪತ್ತು, ಆಡಳಿತ, ಆಭರಣ ಸೀರೆ, ಶ್ರಾವಣದ ಆಚರಣೆ ಇವನ್ನೆಲ್ಲ ನೆನೆಸಿಕೊಂಡು ದುಃಖಿಸುತ್ತಾಳೆ: 'ಪಾಪಿ ಕೇಳ ನಮ್ಮಂಥಾ ಪಾತಕರ್‍ಯಾರಿಲ್ಲ' ಎಂದು ತನ್ನನ್ನು ತಾನು ಹಳಿದುಕೊಳ್ಳುತ್ತಾಳೆ. ಚೆನ್ನಮ್ಮನನ್ನು ಅಗಲುವ ಸಂದರ್ಭ ಅವಳಿಗೆ ಅಸಹನೀಯವೆನಿಸುತ್ತದೆ. ಅಲಗು ಕಟ್ಟಿ ಅದಕ್ಕೆ ಹಾಯಲು ಯತ್ನಿಸುವಳು. ಆಗ 'ತೊತ್ತುಗಳೆಲ್ಲರು ಸುತ್ತಲು ಮುತ್ತಿದರು'. ಅವಳ 'ನೀರು ಇಲ್ಲದ ಮಲ್ಲಿಗೆ ಬೇರ ಒಣಗಿ ಹೋದಂತೆ' ಆಗಿನ ಸ್ಥಿತಿ ನೋಡಿ ನಾಡೆಲ್ಲ ಮರುಗಿತು. ಈರವ್ವನನ್ನು ಕುಸುಗಲ್ಲಿಗೆ ಸಾಗಿಸುವಾಗ ರಾಯಣ್ಣನ ಭಯ ಬ್ರಿಟಿಷರಿಗಿತ್ತು ಅವಳ ಮೇಲೆ ಖಚಿತ ಆಪಾದನೆ.

**ರಾತ್ರಿ ರಾಯನಾಯಕನ್ಹಚ್ಚಿ ದೌಡಮಾಡಿ**
**ಸುತ್ತಿನಹಳ್ಳಿ ಅವನ ಕೈಯಿಂದ ಸುಡಿಸ್ತಿ.**

–ಎಂಬುದಾಗಿದೆ. ಅವಳು ಅನ್ನ ಉದಕ ಬಿಟ್ಟಳು. 'ಒಣಗಿದ ಸುಣ್ಣದ್ಹಾಂಗ ದೇಹಸುಟ್ಟಳು'. ನವಲಗುಂದದ ಕಾಡಸಿದ್ಧನಲ್ಲಿಗೆ ಹೋಗಿ ಜಂಗಮಾರಾಧನೆ ಮಾಡಿದಳು. 'ಒಡವಿ ವಸ್ತುಗಳನೆಲ್ಲ ಬಿಡದೆ ದಾನವ ಕೊಟ್ಟಳು'. ಧಾರವಾಡದಲ್ಲಿ 'ಮರಣಕಾಲ ಬಂದು ಪ್ರಾಣಬಿಟ್ಟಳು'. ಅವಳ ಶವಯಾತ್ರೆಯ ವೈಭವವನ್ನು ಲಾವಣಿಕಾರ ಮನದುಂಬಿ ಬಣ್ಣಿಸಿದ್ದಾನೆ. 'ಮಹಾನಾಡ ಜನ ಸೇರಿ ನಿಂತು ಸುರಿಸ್ಯಾರೊ ಕಣ್ಣೀರು'. ದತ್ತಕ ಸುಳ್ಳಾದ ಮೇಲೆ ಸವಾಯಿ ಮಲ್ಲಸರ್ಜ ತಲೆಮರೆಸಿಕೊಂಡಿರಬೇಕು. ಈ ಲಾವಣಿ ಪ್ರಕಾರ ಅವನು ಧಾರವಾಡ ಶಹರದಲ್ಲಿದ್ದು ಈರವ್ವನ ಮರಣಕ್ಕೆ ದುಸ್ಥಿತಿಗೆ ಮರುಗಿ ದುಃಖಿಸಿದನು.

ಈರವ್ವನ ಕುರಿತಾದ ಇನ್ನೊಂದು ಜನಪದ ಹಾಡು– 'ಈರವ್ವನ ದುರಂತ ಮರಣ'– ಒಂದು ಮುಖ್ಯ ಸಂದೇಹವನ್ನು ಎತ್ತುತ್ತದೆ. ಈರವ್ವಳಿಗೆ ವಿಷ ನೀಡಲಾಯಿತು. ಅದರಿಂದಾಗಿ ಅವಳ ಸಾವು ಸಂಭವಿಸಿತೆಂದು ಈ ಹಾಡು ಹೇಳುತ್ತದೆ. ಈರವ್ವನದು ಸಹಜ ಸಾವಲ್ಲ. ಬ್ರಿಟಿಷರು ಮಾಡಿದ ಕೊಲೆ ಎಂಬ ನಂಬಿಗೆ ಜನಪದದಲ್ಲಿದ್ದಂತಿದೆ. ಇತರ ಹಾಡುಗಳಲ್ಲಿ ಬಂದಿರುವ 'ಶೀರಿಕೊಂಡಳು ಬಾಲಿಕೆಯು ನೀಲವಜ್ರ ವಿಷ ಸೇವಿತದಿ' ಮತ್ತು 'ಈರವ್ವನ ಕೊಂದವರ ವಂಶ ಹುರಿಯಲಿ' ಎಂಬ ಮಾತುಗಳು ಪ್ರಸ್ತುತ ಹಾಡಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಈರವ್ವನನ್ನು ಧಾರವಾಡದ ಲೈನ ಪೇಟಿಗೆ, ಉಳವಿ ಚೆನ್ನಬಸವನ ದೇವಸ್ಥಾನಕ್ಕೆ ಕರೆತಂದರು. ಬೇಬರ್ ಎಂಬ ಬ್ರಿಟಿಷ್ ಅಧಿಕಾರಿ ಅವಳಿಗೆ ವಿಷದ ಗುಳಿಗೆಗಳನ್ನು ನೀಡಿದ. ನಿಚ್ಚಣಿಕೆ ಹತ್ತಿ ಕಿತ್ತೂರ ಕಡೆ ನೋಡಿ 'ಕಿತ್ತೂರು ವಾಡೇಕ ದಿಕ್ಕ ಇಲದಂಗಾತು' ಎಂದು ದುಃಖಿಸಿ ಜೀವ ಬಿಟ್ಟಳು. 'ಬೇಬರ್ ಸತ್ತಾಳವಳಂತ ನಗತಾನ' ಎಂಬ ಮಾತು ಆ ಅಧಿಕಾರಿಯ ಕ್ರೌರ್ಯವನ್ನು ಬಿಂಬಿಸುತ್ತದೆ.

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

ಭಾರತದ ಸ್ವಾತಂತ್ರ್ಯ ಚಳವಳಿಗೆ ನಾಂದಿ ಹಾಡಿದ ಕೀರ್ತಿ ಬೆಳಗಾವಿ ಜಿಲ್ಲೆಯ ಕಿತ್ತೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಕಿತ್ತೂರು ರಾಣಿ ಚನ್ನಮ್ಮಳನ್ನು ಭಾರತ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕೆ ಎಂದು ಕರೆಯಲಾಗುತ್ತಿದೆ. ಉತ್ತರ ಭಾರತದ ಝಾನ್ಸಿ ರಾಣಿ ಲಕ್ಷ್ಮಿಬಾಯಿಯ ಹೋರಾಟಕ್ಕಿಂತ ಇಪ್ಪತ್ತೈದು ವರ್ಷ ಮೊದಲೇ ಸ್ವಾತಂತ್ರ್ಯ ಹೋರಾಟಕ್ಕೆ ಕ್ರಾಂತಿಕಹಳೆ ಮೊಳಗಿಸಿದವರು ರಾಣಿ ಚನ್ನಮ್ಮ ಮತ್ತು ಅವಳ ಬಲಗೈ ಬಂಟ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ. ಇದು ಸಮಸ್ತ ಕನ್ನಡಿಗರೆಲ್ಲ ತುಂಬ ಅಭಿಮಾನ ಮತ್ತು ಹೆಮ್ಮೆ ಪಡುವ ಸಂಗತಿಯಾಗಿದೆ.

ವ್ಯಾಪಾರದ ನೆಪದಿಂದ ದೇಶದೊಳಗೆ ಬಂದ ಆಂಗ್ಲರು ಇಡೀ ದೇಶವನ್ನೇ ತಮ್ಮ ಸ್ವಾಧೀನ ಪಡೆಯತೊಡಗಿದರು. ವೈಸರಾಯ್ ಆಗಿದ್ದ ಲಾರ್ಡ್ ಡಾಲ್ ಹೌಸಿ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನು ತಂದು ಸಂಸ್ಥಾನಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಸಂಚು ರೂಪಿಸಿದ. ಇಂಥ ಒಂದು ತಂತ್ರಕ್ಕೆ



ಬಲಿಯಾದುದು ಕಿತ್ತೂರು ಸಂಸ್ಥಾನ. ಧಾರವಾಡ ಪ್ರಾಂತದ ಜಿಲ್ಲಾಧಿಕಾರಿಯಾಗಿದ್ದ ಥ್ಯಾಕರೆ ೨೩ ಅಕ್ಟೋಬರ್ ೧೮೨೪ರಂದು ಕಿತ್ತೂರು ಮೇಲೆ ದಾಳಿ ಮಾಡುತ್ತಾನೆ. ಈ ಸಂದರ್ಭದಲ್ಲಿ ಕಿತ್ತೂರು ಸೈನಿಕರು ಥ್ಯಾಕರೆಯ ರುಂಡ–ಮುಂಡ ಬೇರೆ ಮಾಡಿ ಬ್ರಿಟಿಷ್ ಸೈನ್ಯವನ್ನು ಧೂಳಿಪಟ ಮಾಡುತ್ತಾರೆ. ಇದೇ ಕಾರಣಕ್ಕಾಗಿ ೨೩ ಅಕ್ಟೋಬರ್ ೧೮೨೪ರಂದು ಕಿತ್ತೂರಿನಲ್ಲಿ ವಿಜಯೋತ್ಸವ ಆಚರಿಸುತ್ತಾರೆ. ನಂತರ ಬ್ರಿಟಿಷರು ತಂತ್ರ–ಕುತಂತ್ರದಿಂದ ಬೃಹತ್ ಸೈನ್ಯದೊಂದಿಗೆ ಕಿತ್ತೂರು ಮೇಲೆ ದಾಳಿ ಮಾಡುತ್ತಾರೆ. ಕಿತ್ತೂರಿನ ಕೆಲವು ದುಷ್ಟ ವ್ಯಕ್ತಿಗಳ ಸಹಕಾರದಿಂದ ಸಂಸ್ಥಾನದ ಮದ್ದುಗುಂಡು ಹಾರದಂತೆ ನೋಡಿಕೊಳ್ಳುತ್ತಾರೆ. ೫ ಡಿಶಂಬರ್ ೧೮೨೪ರಂದು ರಾಣಿ ಚನ್ನಮ್ಮ ಬಂಧನಕ್ಕೊಳಗಾಗುತ್ತಾಳೆ. ಅವಳನ್ನು ಬೈಲಹೊಂಗಲದಲ್ಲಿ ಗೃಹಬಂಧನದಲ್ಲಿಡುತ್ತಾರೆ. ರಾಣಿ ಚೆನ್ನಮ್ಮ ಅವಳ ಸೊಸೆ ಅಪ್ರಾಪ್ತ ವಯಸ್ಸಿನ ವೀರಮ್ಮ ಗೃಹಬಂಧನದಲ್ಲಿದ್ದಾಗಲೇ ದುರಂತ ಮರಣಕ್ಕೊಳಗಾಗುತ್ತಾರೆ.

ಈ ಸಂದರ್ಭದಲ್ಲಿ ಕಿತ್ತೂರಿನ ಕೆಲವು ಸ್ವಾಭಿಮಾನಿ ತರುಣರು ಕೂಡಿ ಹೋರಾಟದ ರೂಪುರೇಷೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತರಾಗುತ್ತಾರೆ. ಇವರ ನಾಯಕರತ್ನವಾಗಿ ಹೊರಹೊಮ್ಮಿದವನು ಸಂಗೊಳ್ಳಿ ರಾಯಣ್ಣ. ರಾಯಣ್ಣ ಸ್ವಾತಂತ್ರ್ಯ ಸ್ವಾಭಿಮಾನದ ಕಿಡಿಯಾಗುತ್ತಾನೆ. ಕಿತ್ತೂರಿನ ಜನರ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಉಳಿಸುವುದಕ್ಕಾಗಿ ರಾಯಣ್ಣ ಪಣ ತೊಡುತ್ತಾನೆ. ಈ ಹೋರಾಟದ ಸಂದರ್ಭದಲ್ಲಿ ಅವನು ನಿರ್ವಹಿಸಿದ ಪಾತ್ರ ಅತ್ಯಂತ ರೋಚಕವಾಗಿದೆ. ಕಿತ್ತೂರು ಇತಿಹಾಸದಲ್ಲಿ ರಾಯಣ್ಣನ ಹೋರಾಟ ಅತ್ಯದ್ಭುತವಾಗಿದೆ. ಯುವಜನರಲ್ಲಿ ಪ್ರೇರಣಾದಾಯಕವಾದ ಸಂವೇದನೆಯನ್ನು ಹುಟ್ಟುಹಾಕಿದ ಶ್ರೇಯಸ್ಸು ರಾಯಣ್ಣನದು.

ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸಿಂಹಸ್ವಪ್ನವಾಗಿ ರಾಯಣ್ಣ ಕಾಡುತ್ತಾನೆ. ಸರಕಾರವನ್ನೇ ಗಡಗಡ ನಡುಗಿಸುತ್ತಾನೆ. ಸರಕಾರಕ್ಕೆ ಸವಾಲೆನಿಸುವ ರೀತಿಯಲ್ಲಿ ಸಂಘಟನೆಯನ್ನು ಮಾಡುತ್ತಾನೆ. ಸಂಗೊಳ್ಳಿ ಬೈಲಹೊಂಗಲ ತಾಲೂಕಿನ ಒಂದು ಚಿಕ್ಕ ಹಳ್ಳಿ. ಅಲ್ಲಿಯ ರೋಗಣ್ಣವರ ಮನೆತನದ ಕೆಂಚಮ್ಮನ ಮಗನಾದ ರಾಯಣ್ಣ, ಕಿತ್ತೂರು ಸಂಸ್ಥಾನದ ಬಗ್ಗೆ ಅಪಾರವಾದ ಶ್ರದ್ಧೆಯನ್ನು

ಇಟ್ಟುಕೊಂಡಿರುತ್ತಾನೆ. ತನ್ನ ಕಾರ್ಯದಕ್ಷತೆ ಮತ್ತು ವೀರಗುಣಗಳಿಂದ ರಾಯಣ್ಣ ಅಲ್ಪಾವಧಿಯಲ್ಲಿ ನಾಯಕರತ್ನವಾಗಿ ಹೊರಹೊಮ್ಮುತ್ತಾನೆ. ವೀರರಾಣಿ ಚೆನ್ನಮ್ಮನ ಪರಮಾಪ್ತ ಬಂಟನಾಗಿ ಸಂಸ್ಥಾನದ ಶ್ರೇಯಸ್ಸಿಗೆ ದುಡಿಯುತ್ತಾನೆ. ರಾಯಣ್ಣನ ಹೋರಾಟ ಅಪ್ರತಿಮವಾಗಿದೆ.

**ಗೆದ್ದ ಕಿತ್ತೂರ ತಂದು ಉದ್ದ ಬೀಳುವೆ ತಾಯಿ**
**ಕದ್ದ ಮಾತಲ್ಲ ನಿಮ್ಮಾಣೆ । ಇಲದಿರಕ**
**ಬಿದ್ದು ಹೋಗುವೆ ರಣದಾಗ**

ಎಂಬ ಧೀರೋದಾತ್ತ ನುಡಿಯನ್ನು ರಾಯಣ್ಣ ಹೇಳುತ್ತಾನೆ. ತನ್ನ ಕಾರ್ಯಾಚರಣೆಗಾಗಿ ಗುಡ್ಡಬೆಟ್ಟಗಳನ್ನು ಆಶ್ರಯಿಸುತ್ತಾನೆ. ಹಂಡಿಬಡಗನಾಥ ನಾಥಸಂಪ್ರದಾಯದ ಅತ್ಯಂತ ಪ್ರಾಚೀನ ಕೇಂದ್ರ. ಇಲ್ಲಿಯ ನಾಥಸಂಪ್ರದಾಯದ ಗುರುಗಳ ಆಶೀರ್ವಾದ ಪಡೆದ ರಾಯಣ್ಣ ತಾಲೂಕು ದಂಡಾಧಿಕಾರಿ ಕಚೇರಿಗೆ ಬೆಂಕಿ ಹಚ್ಚಿ ಬ್ರಿಟಿಷ್ ಅಧಿಕಾರಿಗಳನ್ನು ಕೆಣಕುತ್ತಾನೆ. ಅವನಲ್ಲಿ ಸುಪ್ತವಾಗಿದ್ದ ಸ್ವಾಮಿನಿಷ್ಠೆ , ನಾಡಪ್ರೇಮ ಹೆಚ್ಚಾಗುತ್ತ ಹೋಗುತ್ತದೆ. ಕಿತ್ತೂರು ಸಂಸ್ಥಾನವನ್ನು ಕಂಪನ ಸರಕಾರದ ಆಳಿಕೆಯಿಂದ ಬಿಡುಗಡೆ ಮಾಡಬೇಕೆಂದು ತನ್ನ ಜೀವನವನ್ನೇ ಅರ್ಪಿಸಿಕೊಳ್ಳುತ್ತಾನೆ. ಮನೆಯನ್ನು ಮರೆತು ಕಷ್ಟದ ದಾರಿ ತುಳಿಯುತ್ತಾನೆ. ಕ್ರಾಂತಿಕಾರ ನಾಯಕನಾಗಿ ಯುವಜನರ ನೇತಾರನಾಗಿ ರೂಪುಗೊಳ್ಳುತ್ತಾನೆ. ಅರಣ್ಯ ಮಧ್ಯದ ಅಡಗು ತಾಣಗಳಲ್ಲಿ ಭೂಗತನಾಗಿ ತನ್ನ ಕ್ರಾಂತಿಕಾರಿ ಚಟುವಟಿಕೆಗಳನ್ನು ಮುಂದುವರೆಸುತ್ತಾನೆ. ತನ್ನ ಗೆಳೆಯರಿಗೂ ಅರಣ್ಯಜೀವನದ ಅರಿವು ಕೊಟ್ಟು ಹೋರಾಟದ ಯೋಜನೆಗಳನ್ನು ರೂಪಿಸುತ್ತಾನೆ. ೪೦೦ ಜನರ ಒಂದು ತಂಡವನ್ನು ಕಟ್ಟಿ ರಾಯಣ್ಣ ದೊಡ್ಡ ಹೋರಾಟವನ್ನೇ ಮಾಡುತ್ತಾನೆ. ಬ್ರಿಟಿಷ್ ಅಧಿಕಾರಿಗಳು ರಾಯಣ್ಣನ ಈ ಹೋರಾಟಕ್ಕೆ ಹೆದರಿ ಕಂಗಾಲಾಗುತ್ತಾರೆ. ರಾಯಣ್ಣನನ್ನು ಬಂಧಿಸಲು ಅನೇಕ ತಂತ್ರ ಕುತಂತ್ರಗಳನ್ನು ರೂಪಿಸುತ್ತಾರೆ. ಯಾವುದಕ್ಕೂ ರಾಯಣ್ಣ ಅವರಿಗೆ ಸಿಗುವುದಿಲ್ಲ. ಖಾನಾಪುರ ತಾಲೂಕಿನ ಬೃಹತ್ ಗುಡ್ಡಗಾಡು ಪ್ರದೇಶ ರಾಯಣ್ಣನ ಕರ್ಮಭೂಮಿ ಆಗುತ್ತದೆ.



ಸುರಪುರದ ರಾಜಾ ವೆಂಕಟಪ್ಪ ನಾಯಕನ ಸಹಾಯದೊಂದಿಗೆ ರಾಯಣ್ಣ ಆಂಗ್ಲರ ವಿರುದ್ಧ ಹೋರಾಟವನ್ನು ತೀವ್ರಗೊಳಿಸುತ್ತಾನೆ. ಹೆಜ್ಜೆ ಹೆಜ್ಜೆಗೂ ರಾಯಣ್ಣ ಬ್ರಿಟಿಷ್ ಸಾಮ್ರಾಜ್ಯಕ್ಕೆ ನುಂಗಲಾರದ ತುತ್ತಾಗುತ್ತಾನೆ.

ಕಿತ್ತೂರು ಸಂಸ್ಥಾನದ ಚರಿತ್ರೆಯನ್ನು ಬರೆಯಬೇಕಾದ ಸಂದರ್ಭದಲ್ಲಿ ರಾಯಣ್ಣನ ಕ್ರಾಂತಿಕಾರ್ಯವನ್ನು ದಾಖಲಿಸಲೇಬೇಕು. ಅಷ್ಟು ಸಂಸ್ಥಾನದ ಉಳಿವಿಗಾಗಿ ಆತ ಪ್ರಯತ್ನಿಸಿದ. ಆದರೆ ಆತನ ಕುರಿತಾಗಿ ಚಾರಿತ್ರಿಕವಾಗಿ ನಮಗೆ ಸಿಗುವ ದಾಖಲೆಗಳು ತುಂಬ ಕಡಿಮೆಯಾಗಿವೆ. ಬ್ರಿಟಿಷ್ ದಾಖಲೆಗಳಲ್ಲಿ ಕೂಡ ಆತನ ಶೌರ್ಯ ಪರಾಕ್ರಮದ ವಿವರಗಳು ದೊರೆಯುವುದು ಕ್ವಚಿತ್ತಾಗಿ. ಆತ ಸಂಪಗಾವಿ ತಹಸೀಲ್ದಾರ ಕಚೇರಿಯನ್ನು ಸುಟ್ಟು ಹಾಕಿದ ಘಟನೆಯೊಂದು ಬ್ರಿಟಿಷರ ದಾಖಲೆಗಳಲ್ಲಿ ಉಳಿದು ಬಂದಿದೆ. ಆದರೆ ರಾಯಣ್ಣನ ಬದುಕನ್ನು ನೂರಾರು ವರ್ಷಗಳ ಕಾಲ ಜನಮಾನಸದಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡಿದವರು ಲಾವಣಿಕಾರರು. ಇಂದು ನಾವು ಭಾವಿಸಿಕೊಂಡಿರುವ ರಾಯಣ್ಣನ ಜೀವನ–ಸಾಧನೆಯ ವಿವರಗಳಿಗೆಲ್ಲ ಲಾವಣಿಗಳೇ ಮೂಲ ಆಕರ ಗಳಾಗಿವೆ ಎಂಬುದನ್ನು ಮರೆಯಲಾಗದು. ನಮ್ಮ ಜನಪದರು ಲಾವಣಿಗಳ ಮೂಲಕ ರಾಯಣ್ಣನನ್ನು ಇಂದಿಗೂ ಜೀವಂತವಾಗಿಟ್ಟಿದ್ದಾರೆ. ಆತನ ಸಾಧನೆಯ ಹೆಜ್ಜೆಗಳನ್ನು ಅತ್ಯಂತ ರಸವತ್ತಾಗಿ ಜನರಿಗೆ ತಿಳಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಹುರಪು ಹುಮ್ಮಸ್ಸು ತುಂಬುವ ಕಾರ್ಯ ಮಾಡಿದ್ದಾರೆ.

ಥ್ಯಾಕರೆ ಮರಣಾನಂತರ ಇಂಗ್ಲಿಷರು ದೊಡ್ಡ ಸೈನ್ಯದೊಂದಿಗೆ ಬಂದು ಕಿತ್ತೂರನ್ನು ವಶಪಡಿಸಿಕೊಳ್ಳುತ್ತಾರೆ. ಆಗ ಕಿತ್ತೂರು ಸಂಸ್ಥಾನದ ಬಗ್ಗೆ ಭಕ್ತಿ ಗೌರವಗಳನ್ನು ಇಟ್ಟುಕೊಂಡಿದ್ದ ರಾಯಣ್ಣನಿಗೆ ಸಹಜವಾಗಿಯೇ ಸಿಟ್ಟು ಬಂದು, ಕ್ರಾಂತಿ ಮಾಡಲೇಬೇಕೆಂದು ಸಂಕಲ್ಪ ಮಾಡುತ್ತಾನೆ. ಆದರೆ ಆತನಿಗೆ ಯಾವುದೇ ಅಧಿಕಾರದ ಸ್ಥಾನಮಾನಗಳಿರಲಿಲ್ಲ, ಸಂಸ್ಥಾನದ ಯಾವ ಜವಾಬ್ದಾರಿಗಳೂ ಇರಲಿಲ್ಲ. ಹೀಗಾಗಿ ಅತ ಶಿವಣಗುತ್ತಿ ದೊರೆಯ ಹತ್ತಿರ ಹೋಗಿ, ಹೋರಾಟ ಮುಂದುವರಿಸಲು ಸಾವಿರ ಸೈನ್ಯದ ನೆರವು ಬೇಡುತ್ತಾನೆ. ಆಗ ಶಿವನಗುತ್ತಿ ದೊರೆ ನಮ್ಮ ರಾಜ್ಯದ ಪೈಲಾವನನ್ನು ಸೋಲಿಸಿದರೆ, ನಿನಗೆ ಸೈನ್ಯದ ನೆರವು ನೀಡುತ್ತೇನೆ ಎನ್ನುತ್ತಾನೆ.

**ಶಿವನಗುತ್ತಿ ಶೂರಗ ಹುಶಾರಂತ ಹೇಳ್ಯಾನ ರಾಯಣ್ಣ ಆಗ**
**ಡಾವ ತರತೇನ ನಿನ್ನ ಚೆಂಡಿನ ಮ್ಯಾಗ**
**ನೀ ಉಳದ ಹೋಗೋ ಭಂಟಾ ನನ್ನ ಕೈಯಾಗ**
**ಕಣ್ಣಮುಚ್ಚಿ ಕಣ್ಣ ತೆರಿಯೊದರೊಳಗ**
**ಶಿವಗುತ್ತಿ ಶೂರನ ಚಂಡಾ ಕಡದ ಒಟ್ಟ ರಾಯಣ್ಣ ಬಹದ್ದೂರ**
**ರಾಜಾಪ್ರತ್ಯಕ್ಷ ನೋಡಿದ ತನ್ನ ಕಣ್ಣಾರಾ**

ಶಿವನಗುತ್ತಿ ಪೈಲಾವನನ್ನು ರಾಯಣ್ಣ ಕೊಂದು ಹಾಕುತ್ತಾನೆ. ಆಗ ಊರಲ್ಲಿ ಆನೆಯ ಮೇಲೆ ರಾಯಣ್ಣನ ಮೆರವಣಿಗೆ ನಡೆಯುತ್ತದೆ. ಖಡೆ ತೋಡೆ ಅರಿವೆ ಆಭರಣ ನೀಡಿ ಸನ್ಮಾನಿಸಿದರು. ಆಗ ರಾಯಣ್ಣ ಮತ್ತೆ ಶಿವನಗುತ್ತಿ ದೊರೆಯಲ್ಲಿ ವಿನಂತಿಸಿಕೊಳ್ಳುತ್ತಾನೆ.

**ಮುಜರಿ ಹೊಡದ ಅಂತಾನ ರಾಯಣ್ಣ ಮುಗಳ ನಗಿ ನಕ್ಕೋತಾ**
**ಬೇಡಿದ್ದ ಕೊಡುವದು ನಮ್ಮ ನಿಮ್ಮ ಕರಾರ**
**ದಂಡ ಕೊಡರಿ ಹಂಗಾರ ಒಂದು ಸಾವಿರ**

ಆಗ ದೊರೆ ಈತನಿಗೆ ನೀ ಇನ್ನೂ ಸಣ್ಣವ, ಅಲ್ಲದೆ ಕಿತ್ತೂರು ನಾಡಿನೊಳಗ 'ಹಳಬ'ನ ನೌಕರಿ ಮಾಡುವವನೆಂದು ಹೇಳುತ್ತಿ, ನಿನಗೇತಕ್ಕೆ ದಂಡು ಬೇಕು? ನೀನೇನು ಬಂಡಾಯ ಮಾಡುವವನೆ? ಎಂದು ಅರಸ ಕೇಳುತ್ತಾನೆ. ಆಗ ರಾಯಣ್ಣ ನೀಡುವ ಉತ್ತರ ಮಾರ್ಮಿಕವಾಗಿದೆ.

**ನಿಮ್ಮ ದಯಾ ಇದ್ದರ ಬಂಡಾಯಿ ಮಾಡಿ ತೋರಿಸ್ತೇನ**
**ಭೂಮಿಯಮ್ಯಾಗ ಪೂರಾ**
**ಬಂಡಾಯ ಅಂಬೋ ಮಾತ ಭಾಳ ಇಲ್ಲರಿ ದೂರಾ॥**

ಇವನ ಮಾತನ್ನು ಕೇಳಿ ಸಂತೋಷಗೊಂಡ ಶಿವನಗುತ್ತಿ ರಾಜ, ಒಂದು ಸಾವಿರ ಜನ ಸೈನಿಕರ ದಂಡನ್ನು ರಾಯಣ್ಣನ ಜೊತೆಗೆ ಕಳಿಸುತ್ತಾನೆ. ಗೊದ್ದೊಳ್ಳಿ ಕೆರೆಯ ದಂಡೆ ಮೇಲೆ ಬ್ರಿಟಿಷರ ಸೈನ್ಯ ಬೀಡುಬಿಟ್ಟಿತ್ತು. ಈ ಸೈನ್ಯದ ಮೇಲೆ ಆಕ್ರಮಣ ಮಾಡಿದ ರಾಯಣ್ಣ ಬ್ರಿಟಿಷರ ಸೈನಿಕರನ್ನು ಕೊಂದು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುತ್ತಾನೆ. ಬ್ರಿಟಿಷ ಸೈನಿಕರನ್ನು ಕೊಂದ ವಿವರಗಳನ್ನು ಲಾವಣಿಕಾರ ಹೀಗೆ ಹೇಳುತ್ತಾನೆ.



**ಕಡಕಡದ ಎಸಳದಾರ ಪ್ರಾಣಾ ತುಳತುಳದ ಒಬ್ಬೊಬ್ಬರನಾ**
**ಹೊಳಹೊಳದ ತೋರ್ಯಾವ ಕತ್ತಿ ಮಿಂಚಿನ ಪರಿಯಾಗಿ**
**ತಪ್ಪಿಸಿ ಹಾರ್ಯಾರಿ ಓಡ್ಯಾರ ಗಿಡಗಳ ಮರಿಗಿ**
**ಚಿತ್ತ ಬಲ್ಹಾಂಗ ಕತ್ತಿಲೆ ಕಡದಾರ ತಿರತಿರಗಿ**
**ಸತ್ರಾಸೆ (೧೭೦೦) ಸಿರದ ರಕ್ತ ಹರದೀತ ಧರಿಗಿ**
**ಸುತ್ತಗಟ್ಟಿ ಹೊಡದಾರ ಒಬ್ಬರೂ ಹೋಗಲಿಲ್ಲ ತಿರುಗಿ**

ಲಾವಣಿಕವಿ ಇಲ್ಲಿ ಪ್ರಾಸದ ಬಳಕೆಗಾಗಿ 'ಸತ್ರಾಸೆ' (೧೭೦೦) ಎಂಬ ಪದವನ್ನು ಬಳಸಿರಬೇಕು. ಕವಿಯ ಉತ್ಪ್ರೇಕ್ಷೆಯೂ ಇರಬೇಕೆನಿಸುತ್ತದೆ. ಏಕೆಂದರೆ ಅಷ್ಟು ಸೈನಿಕರನ್ನು ಕೊಂದ ದಾಖಲೆ ಮತ್ತೆಲ್ಲಿಯೂ ನಮಗೆ ದೊರೆಯುವುದಿಲ್ಲ.

ಇದೇ ಘಟನೆಯನ್ನು ಇನ್ನೊಬ್ಬ ಲಾವಣಿಕಾರ ಹಾಡುವಾಗ ಸಂಖ್ಯೆಯಲ್ಲಿ ಬದಲಾವಣೆ ಮಾಡುತ್ತಾನೆ.

**ಪಿಸ್ತೂಲ ಪಿರಂಗ ಹಿರದು**
**ಬಾಕ ಬಿಲ್ಲು ಬಾಲೆಲೊಗದು**
**ನಾಕನೂರಾಮಂದಿ ಕೊಂದರಲ್ಲಿ**
**ಕಂಡುಮಂದಿ ಚಂಡಿ ಕೋದಾರ**
**ರುಂಡ ಬಿದ್ದವು ಗೊತ್ತ ಇಲ್ಲದ**
**ತುಂಡ ತುಂಡ ಮಾಡ್ಯಾರೊಂದೆ ಏಟು**

ಇಲ್ಲಿ ಸತ್ತವರ ಸಂಖ್ಯೆ ನಾಲ್ಕು ನೂರು ಎಂದು ದಾಖಲಾಗಿದೆ. ಲಾವಣಿಕಾರರು ತಮ್ಮ ಪ್ರಾಸಕ್ಕೆ ಬೇಕಾದಂತೆ ಹೊಂದಿಸಿಕೊಂಡಿರುವ ಸಾಧ್ಯತೆಗಳು ಹೆಚ್ಚಿವೆ.

ಈ ಲಾವಣಿಗಳು ಬ್ರಿಟಿಷ ಸರಕಾರ ಇದ್ದಾಗಲೇ ಚಲಾವಣೆಯಲ್ಲಿ ಬಂದಿರುವುದರಿಂದ ರಾಯಣ್ಣನ ಇತಿಹಾಸವನ್ನು ಲಾವಣಿಗಳ ಮೂಲಕವೇ

ನಾವು ಕಟ್ಟಿಕೊಡಬೇಕಾದ ಅನಿವಾರ್ಯತೆ ಇದೆ. ೧೮೮೫ರಲ್ಲಿ ಇಂಡಿಯನ್ ಎಂಟಿಕ್ವಿಯರ್ ಪತ್ರಿಕೆಯಲ್ಲಿ ಮೊಟ್ಟಮೊದಲ ಬಾರಿಗೆ ರಾಯಣ್ಣನ ದಂಗೆಯನ್ನು "The Insurrection of Rayanna of Sangolli" ಎಂಬ ಹೆಸರಿನಿಂದ ದಾಖಲಿಸುವ ಒಂದು ಲಾವಣಿ ಪ್ರಕಟವಾಗಿರುವುದು ಮಹತ್ವದ ಸಂಗತಿಯಾಗಿದೆ. ಹೀಗಾಗಿ ರಾಯಣ್ಣ ಸತ್ತ ಐವತ್ತು ವರ್ಷಗಳ ನಂತರ ಈ ಲಾವಣಿ ಪ್ರಕಟವಾಗಿರುವುದನ್ನು ನೋಡಿದರೆ, ಅದಕ್ಕೂ ಮೊದಲೇ ಜನಪದರು ರಾಯಣ್ಣನ ದಂಗೆಯನ್ನು ಕಥೆ ಮಾಡಿ ಹಾಡಿದ ಸಾಧ್ಯತೆ ಇದೆ. ಜನರಲ್ಲಿ ರಾಯಣ್ಣನಂತಹ ವೀರನ ಕಥೆಯನ್ನು ಹೇಳುವ ಮೂಲಕ ಸ್ವಾತಂತ್ರ್ಯದ ಅರಿವು ಮತ್ತು ಅಸ್ಮಿತೆಯನ್ನು ಮೂಡಿಸುವ ಕಾರ್ಯ ಮಾಡಿದವರು ಲಾವಣಿಕಾರರು.

ಜನಪದರು ರಾಯಣ್ಣನನ್ನು ಕುರಿತು ಲಾವಣಿ ಹಾಡುತ್ತ ನಾಡ ಸುತ್ತಿ ಹೋರಾಟವನ್ನು ಮುಂದುವರಿಸಲು ಪ್ರೇರಣೆ ನೀಡುತ್ತಾರೆ.

**ಏ ಸಿಂಹದಂತ ಸಂಗೊಳ್ಳಿ ರಾಯಾ**
**ಭೂಮಿಗೆ ಬಿದ್ದಂಗ ಸೂರ್ಯನ ಛಾಯಾ**
**ರಕ್ತದ ಕಾವಲಿ ಹರಿಸಿದಾನೋ ಕಿತ್ತೂರ ನಾಡಾಗ**
**ಬಾಳ ಬಂಟಸ್ತಾನ ಪದವಿ ಇತ್ತ ಅವನ ಹೊಟ್ಟಿಯೊಳಗ**
**ಸೃಷ್ಟಿಯಲ್ಲಿ ಹುಟ್ಟಿ ಬಂದ ಶ್ರೇಷ್ಠನಾಗಿ ಹೋಗಿದಾನ**
**ದುಷ್ಟ ರಾವಣಾಸುರನ ಲಂಕಾ ಸುಟ್ಟಂಗ**
**ಹಿಂಗ ಸಂಪಗಾವಿ, ಬೀಡಿ ಕಚೇರಿ ಸುಟ್ಟಾನ ಕಲಿಕಿಯೊಳಗ**

ರಾಯಣ್ಣ ಗರಡಿಮನೆಯಲ್ಲಿ ಪಟ್ಟು ವರಸೆ ಸಾಮುಗಳಿಂದ ತರಬೇತಿ ಪಡೆದ ಕುಸ್ತಿಪಟುವಾಗಿದ್ದ. ಸಮರಕಲೆಯನ್ನು ಬಲ್ಲವನಾಗಿದ್ದ. ಗುರಿ ಹೊಡೆಯುವುದು, ದೊಣ್ಣೆ ವರಸೆ, ಕತ್ತಿ ವರಸೆಗಳಲ್ಲಿ ಪಾರಂಗತನಾಗಿದ್ದ. ದೇಶಭಕ್ತನಾಗಿದ್ದಂತೆ, ದೈವಭಕ್ತನೂ ಆಗಿದ್ದ ರಾಯಣ್ಣ. ಬಿಚ್ಚುಗತ್ತಿ ಚನ್ನಬಸಪ್ಪ, ಅಮಟೂರ ಬಾಳಪ್ಪ ರಾಯಣ್ಣನೊಂದಿಗೆ ಕೂಡಿ ಬೆಳೆದ ಕ್ರಾಂತಿಕಲಿಗಳಾಗಿದ್ದರು.

ರಾಯಣ್ಣ ಗೆರಿಲ್ಲಾ ಮಾದರಿಯ ಯುದ್ಧ ಮಾಡಿ, ಬ್ರಿಟಿಷರಿಗೆ ಚಳ್ಳೇಹಣ್ಣು ತಿನ್ನಿಸಿದ ಎನ್ನುವುದು ಸರ್ವರಿಗೂ ತಿಳಿದ ಸಂಗತಿ. ಆದರೆ ಅದು ಮೊಟ್ಟಮೊದಲು



ದಾಖಲೆಯಾದುದು ಲಾವಣಿಯ ಸಾಹಿತ್ಯದಲ್ಲಿ. ಲಾವಣಿಗಳಲ್ಲಿ ಒಂದು ಕಡೆ ಹೀಗೆ ಪ್ರಸ್ತಾಪ ಬರುತ್ತದೆ.

**ಸಂಗೊಳ್ಳಿ ರಾಯಣ್ಣ ಮಂಗ್ಯಾನ ಕುಲದಾವ**
**ಟೊಂಗಿ ಟೊಂಗೀಗಿ ಜಿಗಿದಾನ॥**

ಲಾಗ ಹಾಕುವಾಗ ರಾಯಣ್ಣ ಹಿಂಬದಿಯಿಂದ ಹನ್ನೆರಡು ಅಕ್ಕಡಿ, ಮುಂಬದಿ ಹನ್ನೆರಡು ಅಕ್ಕಡಿ ಹಾರುತ್ತಿದ್ದನಂತೆ–ಒಂದು ಅಕ್ಕಡಿ ಎಂದರೆ ಸುಮಾರು ಆರು ಅಡಿ. ಮುಷ್ಟಿಯುದ್ಧ (ಕುಸ್ತಿ)ದಲ್ಲೂ ಆತನನ್ನು ಸೋಲಿಸುವವರಿರಲಿಲ್ಲ. ಇದರಿಂದ ಆತ ಪ್ರಚಂಡವಾದ ದೈಹಿಕ ಸಾಮರ್ಥ್ಯ ಪಡೆದಿದ್ದನೆಂಬುದು ಸ್ಪಷ್ಟವಾಗುತ್ತದೆ. ಮಲಪ್ರಭಾ ತೀರದ ಜನರ ದೇಹ ಲಕ್ಷಣಗಳೆಲ್ಲ ಆತನಲ್ಲಿ ಸಮಾವೇಶಗೊಂಡಿದ್ದವೆಂದು ತಿಳಿಯಬಹುದು ಎಂದು ಡಾ. ಎಂ.ಬಿ.ನೇಗಿನಹಾಳ ಅವರು ಹೇಳುವುದನ್ನು ಗಮನಿಸಿದರೆ ರಾಯಣ್ಣ ದೈಹಿಕವಾಗಿ ತುಂಬ ಸಾಮರ್ಥ್ಯ ಪಡೆದಿದ್ದನೆಂಬ ಅರಿವು ನಮಗಾಗುತ್ತದೆ. ಆತನ ಸಮಾಧಿಯನ್ನು ಉದ್ದ ಗಮನಿಸಿದರೆ, ಎಷ್ಟು ಎತ್ತರದ ವ್ಯಕ್ತಿಯಾಗಿದ್ದ ಎನ್ನುವುದು ತಿಳಿಯುತ್ತದೆ.

ರಾಯಣ್ಣ ಛತ್ರಪತಿ ಶಿವಾಜಿ ಮಹಾರಾಜರ ಸಮರ ನೀತಿಯನ್ನು ಬಳಸಿ ಹೋರಾಟ ಮಾಡಿದ. ಒಂದು ಜಾಗೆಯಿಂದ ಇನ್ನೊಂದು ಜಾಗೆಗೆ ಗೊತ್ತಿಲ್ಲದಂತೆ ಸಾಗುವುದು, ವೈರಿ ಪಡೆಯನ್ನು ಛಿದ್ರಗೊಳಿಸುವುದು, ಸನ್ಯಾಸಿ ವೇಷದಲ್ಲಿ ವೈರಿಗಳ ರಹಸ್ಯ ಅರಿತು ಎದುರೇಟು ನೀಡುವುದು; ಇವೆಲ್ಲ ಗೆರಿಲ್ಲಾ ಯುದ್ಧದ ರೀತಿನೀತಿಗಳು. ಕೋಟೆಗೆ ಮುತ್ತಿಗೆ, ಸರಕಾರಿ ಕಚೇರಿಗಳ ನಾಶ, ಖಜಾನೆಗಳ ಲೂಟಿ ಮೊದಲಾದ ಕಾರ್ಯಗಳಿಂದ ರಾಯಣ್ಣ ಬ್ರಿಟಿಷರಿಗೆ ತಲೆನೋವಾಗಿ ಪರಿಣಮಿಸಿದ್ದ. ಗೆರಿಲ್ಲಾ ಮಾದರಿಯ ಹೋರಾಟವನ್ನು ಕರ್ನಾಟಕದಲ್ಲಿ ಮೊಟ್ಟಮೊದಲು ಮಾಡಿದ ಕೀರ್ತಿ ರಾಯಣ್ಣನದು. ವೈರಿ ಪಡೆಯ ಮೇಲೆ ಆಕಸ್ಮಿಕ ಆಕ್ರಮಣ, ಹೊಂಚುಗಾರಿಕೆ, ಚಾಣಾಕ್ಷತೆ ಮೊದಲಾದ ಗುಣಗಳಲ್ಲಿ ಶಿವಾಜಿಯನ್ನೇ ರಾಯಣ್ಣ ಮಾದರಿಯಾಗಿರಿಸಿಕೊಂಡಿದ್ದ.

ಸಂಪಗಾವಿ, ದೇಶನೂರು ಗುಡ್ಡ, ಹಂಡಿಬಡಗನಾಥ ಬೆಟ್ಟ, ಹಲಸಿ, ಕಕ್ಕೇರಿ, ಖಾನಾಪುರ, ನಂದಗಡ, ಬೆಳಗಾವಿ, ಸಂಗೊಳ್ಳಿ, ಪರಸಗಡ,

ಖೋದಾನಪುರ, ಬೀಡಿ, ನೇಗಿನಹಾಳ, ಹಳ್ಯಾಳ, ಹನುಮನಟ್ಟಿ, ಅಗಸನಕಟ್ಟೆ, ಬಾಳಗುಂದಿ ಗುಡ್ಡ ಮೊದಲಾದ ಸ್ಥಳಗಳು ರಾಯಣ್ಣನ ಸಮರ ಸಾಧನೆಯ ತಾಣಗಳಾಗಿದ್ದವು.

ಖುದಾನಪೂರದ ಲಿಂಗನಗೌಡ ಮತ್ತು ನೇಗಿನಾಳದ ವೆಂಕನಗೌಡ ಇಬ್ಬರೂ ಕೂಡಿ ರಾಯಣ್ಣನಿಗೆ ಮೋಸ ಮಾಡುತ್ತಾರೆ. ಸ್ವಜನರಿಂದ ಮೋಸಕ್ಕೊಳಗಾದ ರಾಯಣ್ಣ ಬ್ರಿಟಿಷ್ ಸೈನಿಕರ ಕೈವಶನಾಗುತ್ತಾನೆ. ೮–೪–೧೮೩೦ರಂದು ರಾಯಣ್ಣನ ಬಂಧನವಾಗುತ್ತದೆ. ವಿಚಾರಣೆಯ ನಾಟಕ ನಡೆದು ಕೊನೆಗೆ ೨೬ ಜನೇವರಿ ೧೮೩೧ರಂದು ನಂದಗಡದಲ್ಲಿ ರಾಯಣ್ಣನನ್ನು ಗಲ್ಲಿಗೇರಿಸಲಾಯಿತು. (ಡಾ. ಸದಾಶಿವ ಒಡೆಯರ್ ಅವರು ತಮ್ಮ ರಾಣಿ ಚನ್ನಮ್ಮ ಗ್ರಂಥದಲ್ಲಿ ರಾಯಣ್ಣನನ್ನು ೨೮ ಡಿಶಂಬರ್ ೧೮೩೦ರಂದು ಗಲ್ಲಿಗೇರಿಸಲಾಯಿತು ಎಂದು ಬರೆದಿದ್ದಾರೆ.) ಇದು ಇನ್ನಷ್ಟು ಪರಿಶೀಲನೆ ಮಾಡಬೇಕಾದ ಅಂಶವಾಗಿದೆ. (ಇತ್ತೀಚೆಗೆ ಕೆಲವರು ರಾಯಣ್ಣ ಹುಟ್ಟಿದ್ದು ಆಗಸ್ಟ್ ೧೫ ಎಂದು ಹೇಳುತ್ತಿದ್ದಾರೆ, ಆದರೆ ಅದಕ್ಕೆ ನಿರ್ದಿಷ್ಟವಾದ ಸಾಕ್ಷ್ಯಾಧಾರಗಳಿಲ್ಲವೆಂದು ಪ್ರೊ. ಜ್ಯೋತಿ ಹೊಸೂರ ಅಭಿಪ್ರಾಯ ಪಡುತ್ತಾರೆ.)

**ಕಕ್ಕೇರಿ ಬಿಷ್ಟವ್ವ ಖನಗಾಂವಿ ಕನ್ನವ್ವ**
**ಕರುಣಿ ಇರಲವ್ವ ರಾಯಣ್ಣನ ಮ್ಯಾಲ ॥ನೀಲ॥**
**ಬಂಗಾರದ ಗೋಲ–ನೀಲ॥**

ರಾಯಣ್ಣ ಕಕ್ಕೇರಿ ಬಿಷ್ಟವ್ವ ಮತ್ತು ಖನಗಾಂವಿ ಕನ್ನವ್ವ ದೇವಿಯರ ಭಕ್ತನಾಗಿದ್ದನೆಂದು ತಿಳಿದು ಬರುತ್ತದೆ. ಕಕ್ಕೇರಿ ಕಿತ್ತೂರು ತಾಲೂಕಿನ ಊರು, ಖನಗಾಂವಿ ಗೋಕಾಕ ತಾಲೂಕಿನ ಊರು. ಗೋಕಾವಿ ನಾಡಿಗೂ ರಾಯಣ್ಣನಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಗೋಕಾಕ ತಾಲೂಕಿನ ಉದಗಟ್ಟಿ ಗ್ರಾಮದ ಉದ್ದವ್ವನಿಗೂ ಆತ ನಡೆದುಕೊಳ್ಳುತ್ತಿದ್ದ ಎಂಬ ಜನಪದ ನಂಬಿಕೆ ಇದೆ. ಉದಗಟ್ಟಿ ಆತನ ಅಡಗು ತಾಣಗಳಲ್ಲಿ ಒಂದಾಗಿತ್ತು ಎಂಬುದು ಇಲ್ಲಿ ಗಮನಿಸುವ ಅಂಶವಾಗಿದೆ.



ರಾಯಣ್ಣನ ಸಮಾಧಿ ಸ್ಥಳ ಶ್ರದ್ಧಾವಂತರ ಭಕ್ತಿಯ ತಾಣವಾಗಿ ಮಾರ್ಪಟ್ಟಿದೆ. ನಿತ್ಯ ನೂರಾರು ಜನ ರಾಯಣ್ಣನ ಸಮಾಧಿ ದರ್ಶನ ಪಡೆಯುತ್ತಾರೆ. ಆತನ ಸಮಾಧಿಗೆ ನಡೆದುಕೊಂಡರೆ, ಪುರುಷತ್ವ ಹೀನ ಯುವಕರು ಮತ್ತೆ ಪುರುಷತ್ವ ಪಡೆಯುತ್ತಾರೆ ಎಂಬ ನಂಬಿಕೆಯ ಜೊತೆಗೆ ಮಕ್ಕಳಾಗದ ಹೆಣ್ಣು ಮಕ್ಕಳು ರಾಯಣ್ಣನ ಸಮಾಧಿಯ ಮೇಲಿರುವ ಆಲದ ಮರಕ್ಕೆ ತೊಟ್ಟಿಲು ಕಟ್ಟಿದರೆ, ಮಕ್ಕಳಾಗುತ್ತವೆ ಎಂಬ ನಂಬಿಕೆಯನ್ನಿಟ್ಟಿದ್ದಾರೆ. ಹೀಗಾಗಿ ಇಂದು ರಾಯಣ್ಣನ ಸಮಾಧಿ ದೈವೀಸ್ವರೂಪ ಪಡೆದುಕೊಂಡಿರುವುದು ಸೋಜಿಗದ ಸಂಗತಿಯಾಗಿದೆ. ಕರ್ನಾಟಕ ಘನ ಸರಕಾರ ರಾಯಣ್ಣನ ಹೆಸರನ್ನು ಅಜರಾಮರವಾಗಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತ ಬಂದಿದೆ.

## ಮುಂದುವರಿದ ಹೋರಾಟದ ಕಥೆ

ತೊಂಭತ್ತು ನಾಲ್ಕು (೯೪) ವರ್ಷಗಳ ಹಿಂದಿನ ಮಾತು; ಇಸ್ವಿ ಸನ್ ೧೯೨೮. ಭಾರತದಲ್ಲಿ ಬ್ರಿಟಿಷ ಸರಕಾರವಿತ್ತು. ಸ್ವಾತಂತ್ರ್ಯ ಬೇಕೆಂದು ದೇಶದ ಜನ ಮಹಾತ್ಮಗಾಂಧೀಜಿಯವರ ಮುಂದಾಳ್ತನದಲ್ಲಿ ಹೋರಾಟ ನಡೆಸಿತ್ತು. ಸತ್ಯಾಗ್ರಹ, ಅಸಹಕಾರ ಚಳವಳಿ ದೇಶದ ತುಂಬ ಸಾಗಿತ್ತು. ಆಗ ಕನ್ನಡ ನಾಡಿನ ಕಿತ್ತೂರ ಊರಲ್ಲಿ ನಾಟಕವೊಂದು ರಚನೆಯಾಯಿತು. ಅದರ ಹೆಸರು **"ಕಿತ್ತೂರು ಕೇಸರಿ"**. ಬರೆದವರು ಚಿಕ್ಕೋಡಿಯ ಸಾವಳಗಿಮಠದ ಶಿವಲಿಂಗ ಸ್ವಾಮಿಗಳು. ಇವರು ನಾಟಕದ ಸಲುವಾಗಿಯೇ ಹುಟ್ಟಿಬಂದಂತಿದ್ದ ಮಹಾನ್ ನಾಟಕಕಾರರು, ನಟರು, ನಾಟಕ ಕಂಪನಿಯ ಮಾಲಿಕರು. ಕಿತ್ತೂರಿನ ಮಾರೀಹಾಳ ಗುರಪ್ಪನವರ ವಿನಂತಿ ಮೇರೆಗೆ ಇವರು ಕಿತ್ತೂರಿನಲ್ಲಿದ್ದು ಚೆನ್ನಮ್ಮನ ಬಗೆಗೆ ಅಭ್ಯಾಸ ಮಾಡಿ, ಅವರಿವರ ಬಾಯಿಂದ ಕತೆ ಕೇಳಿ ನಾಟಕ ಬರೆದರು. ಈ ನಾಟಕದ ವಿಷಯ ಗದಗ ಹತ್ತಿರದ ರೋಣ ತಾಲೂಕಿನ ಅಬ್ಬಿಗೇರಿಯ ಬಸನಗೌಡರಿಗೆ ಗೊತ್ತಾಯಿತು.

ಅಬ್ಬಿಗೇರಿಯ ಗೌಡರದು ಏಳು ಜನ ಅಣ್ಣ ತಮ್ಮಂದಿರ ಅವಿಭಕ್ತ ಕುಟುಂಬ. ಅವರಲ್ಲಿ ಮೂವರು ವಕೀಲಿ ವೃತ್ತಿಯವರು. ಎಲ್ಲರೂ ಸುಶಿಕ್ಷಿತರು. ಚೆನ್ನಮ್ಮನ ನಾಟಕ ಕೂಡಿಸಬೇಕೆಂದು ಅವರು ಸ್ವಾಮಿಗಳನ್ನೇ ಕೇಳಿಕೊಂಡರು. ಸ್ವಾಮಿಗಳು ಹೇಳಿದಂಥ ನಾ ನೀ ಅನ್ನುವ ನಟ–ನಟಿಯರನ್ನು ಕರೆಸಿದರು.

ನಾಟಕದ ತಾಲೀಮು ಸುರುವಾಯಿತು. ನಾಟಕ ಬರೆದ ಸ್ವಾಮಿಗಳೇ ಡೈರೆಕ್ಟರ್. ಕರ್ನಾಟಕ ಗಂಧರ್ವ ಮುರುಗೋಡ ಗಂಗಾಧರಪ್ಪ, ಪೈಲ್ವಾನ್‌ನಟ ಹಳ್ಳಿಗುಡಿ ಸದಾಶಿವಪ್ಪ, ಹಾಸ್ಯಚಕ್ರವರ್ತಿ ಶಿವಾಜಿ ಮಲ್ಲೂರ, ಲಕ್ಷ್ಮಣರಾವ ಸೊಂಡೂರ ಇವರೆಲ್ಲ ಪಾತ್ರಧಾರಿಗಳು. ಚೆನ್ನಮ್ಮನ ಪಾತ್ರದಲ್ಲಿ ಗದಗ ರತ್ನಾ. ಏಣಗಿ ಬಾಳಪ್ಪನವರು ಥ್ಯಾಕರೆ ಸಾಹೇಬನ ಮಗನ ಪಾತ್ರ ಮಾಡುತ್ತಿದ್ದರು. ಹಾರ್ಮೋನಿಯಂ ಬಾರಿಸಲು ವಿಠ್ಠಲ ಕಬಾಡಿ, ತಬಲಾಕ್ಕೆ ಗದಿಗೆಯ್ಯಸ್ವಾಮಿ ಮಂಟೂರ. ನಾಟಕದ ತಯಾರಿ, ಸೀನ್ ಸೀನರಿಗಾಗಿ ಬಸನಗೌಡರು ಅಂದಿನ ಕಾಲದಲ್ಲಿ ಅರವತ್ತು ಸಾವಿರ ರೂಪಾಯಿ ಖರ್ಚು ಮಾಡಿದರಂತೆ.

ನಾಟಕದ ಉದ್ಘಾಟನೆ ಗದುಗಿನಲ್ಲಿ. ಪರಿಣಾಮ ಅದ್ಭುತ. ನಾಟಕ ನೋಡಿ ಹೊರ ಬಂದ ಪ್ರೇಕ್ಷಕರು ಥೇಟರ್ ಎದುರಿನಲ್ಲಿಯೇ ವಿದೇಶಿ ಬಟ್ಟೆ–ವಸ್ತುಗಳನ್ನು ಸುಡತೊಡಗಿದರು. ಸುತ್ತ ಮುತ್ತಲಿನ ಹಳ್ಳಿಗಳಿಂದ ನಾಟಕ ನೋಡಲು ಬಂದ ಜನ ಊರಿಗೆ ಹಿಂದಿರುಗುವಾಗ ದಾರಿಯಲ್ಲಿದ್ದ ಸಿಂಧಿಗಿಡಗಳನ್ನು ಕಡಿದು ಹಾಕುತ್ತಿದ್ದರು. ಗಾಂಧೀಜಿ ಕೀ ಜೈ ಎನ್ನುತ್ತಿದ್ದರು. ಇದೇನು ಚಮತ್ಕಾರ! ಇಂಥ ಆವೇಶ, ಇಂಥ ಅಭಿಮಾನ ಜನರಲ್ಲಿ ಒಮ್ಮೆಲೇ ಪುಟಿದೇಳಲು ಕಾರಣವೇನು? ಎಂದು ಪತ್ತೆ ಹಚ್ಚಲು ಅಧಿಕಾರಿಗಳಿಗೆ ತಡವಾಗಲಿಲ್ಲ. ಗಸ್ತು ತಿರುಗುತ್ತಿದ್ದ ಪೋಲೀಸರು ಹೇಳಿದರು, ಇದು 'ಕಿತ್ತೂರ ಕೇಸರಿ ಅರ್ಥಾತ್ ವೀರರಾಣಿ ಕಿತ್ತೂರ ಚೆನ್ನಮ್ಮ' ನಾಟಕ ಪರಿಣಾಮ. ಕರ್ನಾಟಕದ ಉತ್ತರ ಭಾಗದಲ್ಲಿ ಗಾಂಧೀಜಿಯವರ ಅಸಹಕಾರ ಚಳವಳಿ ತೀವ್ರಗೊಳ್ಳಲಿಕ್ಕೆ ಈ ನಾಟಕವೇ ಕಾರಣ ಎಂದು ಅಧಿಕಾರಿಗಳು ತೀರ್ಮಾನಿಸಿದರು. 'ಕಿತ್ತೂರ ಕೇಸರಿ' ನಾಟಕ ನಿಷೇಧಿಸಲು ಶಿಫಾರಸು ಮಾಡಿದರು.

ಸ್ವಾತಂತ್ರ್ಯಾಭಿಮಾನ ಉಕ್ಕಿಸುವ ಕ್ರಾಂತಿಕಾರಿ ಅಂಶ ನಾಟಕದಲ್ಲೇನಿತ್ತು? ಎಂದು ಕೇಳಿದರೆ, ಚೆನ್ನಮ್ಮ ಹೇಳುವ ಒಂದೆರಡು ಮಾತುಗಳನ್ನು ಇಲ್ಲಿ ಉಲ್ಲೇಖಿಸಬೇಕೆನಿಸುತ್ತದೆ. ಯುದ್ಧದ ಸಿದ್ಧತೆ ನಡೆದಾಗ ಚೆನ್ನಮ್ಮ ಕಲ್ಮಠದ ಶ್ರೀಗಳಿಂದ ಆಶೀರ್ವಾದ ಪಡೆಯುವಾಗ ಹೇಳುವ ಮಾತು :

"ಪೂರ್ವಕಾಲದಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳವರ ಅನುಗ್ರಹದಿಂದ ಹುಕ್ಕಬುಕ್ಕರಾಯರು ವಿಜಯನಗರವೆಂಬ ಸಾಮ್ರಾಜ್ಯವನ್ನು ಸ್ಥಾಪಿಸಲಿಲ್ಲವೇ? ಅದರಂತೆ ಶಿವಾಜಿ ಮಹಾರಾಜರು ತಮ್ಮಂಥ ಮಹಾರಾಜರ ಅನುಗ್ರಹದಿಂದ ಮರಾಠಾರಾಜ್ಯವನ್ನು ಸ್ಥಾಪಿಸಲಿಲ್ಲವೇ? ಬಿಂಬವನ್ನು ಪ್ರತಿಬಿಂಬವು ಹಿಂಬಾಲಿಸಿದಂತೆ ಶ್ರೀಗಳಾದ ರಾಮದಾಸರೂ ಅವರ ಬೆಂಬಲಿಗರಾಗಲಿಲ್ಲವೇ? ತಾವು ನನ್ನ ಬೆಂಬಲಿಗರಾಗಿದ್ದರೆ ಸಾಕು, ಈ ನಮ್ಮ ಸ್ವಾತಂತ್ರ್ಯ ಎಂಬ ಮಂದಿರವನ್ನು ಯಾರು ಹಾಳು ಮಾಡುವರೋ ನೋಡುವೆನು".[೨೩]



ಕಮೀಶನರ್ ಹೂಡಿದ ಎರಡನೆಯ ಯುದ್ಧದಲ್ಲಿ ತನ್ನ ಜನರೇ ತನಗೆ ಮೋಸ ಮಾಡಿದ ಸಂಗತಿ ತಿಳಿದಾಗ ಪ್ರೇಕ್ಷಕರನ್ನು ಕುರಿತು ಚೆನ್ನಮ್ಮ ಹೇಳುವ ಮಾತು :

"ಅಮ್ಮಗಳಿರಾ, ಪುರುಷರಿಂದಾಗದ ಘೋರ ಕೃತ್ಯವನ್ನು ಕೈಕೊಂಡು ನಮ್ಮ ಹೆತ್ತಮ್ಮನನ್ನು ಸ್ವತಂತ್ರವಾಗಿ ಇರಿಸಬೇಕೆಂದೆನು. ಅದು ಅದು ಸಾಧ್ಯವಾಗಲಿಲ್ಲ. ಮೋರೆಯ ಮೇಲೆ ಮೀಸೆಯನ್ನು ಹೊತ್ತ ಪುರುಷರೇ ಕನ್ನಡ ತಾಯಿಯ ಹೆಸರು ಉಳಿಯದಂತೆ ಮಾಡಿದರು. ನಮ್ಮ ಸ್ತ್ರೀಯರು ಒಳ್ಳೆ ಕೋಮಲ ಮನಸ್ಸಿನವರು. ನನ್ನ ಬಗ್ಗೆ ನಿಮ್ಮಲ್ಲಿ ತೀವ್ರ ಕಣ್ಣೀರು ಬರಬಹುದು. ಆದರೆ ಹಾಗೆ ಕಣ್ಣೀರು ಚೆಲ್ಲದೇ ಕೈಲಾಗದ ಹೇಡಿಗಳಂತೆ ಕುಳಿತಿರುವ ನಿಮ್ಮ ಪುರುಷರಿಗೆ ಪ್ರೋತ್ಸಾಹ ಕೊಟ್ಟು, ನಿಮ್ಮ ಕನ್ನಡ ತಾಯಿಯನ್ನು ರಕ್ಷಿಸುವಂತೆ ಮಾಡಿರಿ".[೨೪]

ಇಂಥ ಮಾತುಗಳನ್ನು ಆಡುವಾಗ ಚೆನ್ನಮ್ಮ ದೇಶದ ಸ್ವಾತಂತ್ರ್ಯವನ್ನು ಪ್ರತಿನಿಧಿಸುವ ಸ್ಫೂರ್ತಿಯ ಚಿಲುಮೆಯಾಗಿ ನಿಲ್ಲುತ್ತಿದ್ದರು. ರಂಗಮಂದಿರದಲ್ಲಿ ತುಂಬಿದ್ದ ಪುರುಷರ ಪೌರುಷಕ್ಕೆ ಸವಾಲು ಹಾಕುವ ಸಿಂಹಿಣಿಯಾಗಿ ಮಿಂಚುತ್ತಿದ್ದಳು. ಚೆನ್ನಮ್ಮಳ ಇಂಥ ಮಾತುಗಳಿಂದ ಸ್ಫೂರ್ತಿ ಪಡೆದ ಪ್ರೇಕ್ಷಕರು ರಂಗಮಂದಿರದ ಹೊರಗೆ ಬರುವಾಗ ಹೋರಾಟದ ಮನೋಭಾವ ಹೊತ್ತುಕೊಂಡೇ ಬರುತ್ತಿದ್ದರು. ಇಂಥವರನ್ನು ನಿಯಂತ್ರಿಸುವುದು ಪೋಲೀಸರಿಗೆ ತುಂಬ ಕಷ್ಟವಾಗುತ್ತಿತ್ತು.

ಇನ್ನೊಂದು ಪ್ರಸಂಗ ಇಲ್ಲಿ ಉಲ್ಲೇಖಿಸಬೇಕು. ಈ ನಾಟಕ ನೋಡಿದ ಬೈಲಹೊಂಗಲ ಹತ್ತಿರದ ನಾಗನೂರಿನ ರಾಚನಾಯ್ಕರ ಮನೆತನದ

ತಾಯಿಯೊಬ್ಬಳು ಪೋಲೀಸ್ ಅಧಿಕಾರಿಗೆ ಸರಿಯಾಗಿ ಪಾಠ ಕಲಿಸಿದಳಂತೆ. ಭೂಗತ ಚಳವಳಿಗಾರರನ್ನು ಹುಡುಕುತ್ತ ಬೆಳಗಾವಿಯ ಇನಸ್ಪೆಕ್ಟರ್ ನಾಗನೂರಿಗೆ ಹೋದ. ಅಲ್ಲಿ ರಾಚನಾಯ್ಕರ್ ಮನೆ ಹೊಕ್ಕು ಗಂಡಸರನ್ನು ಒಪ್ಪಿಸಲು ಕೇಳಿದನಂತೆ. ಅವರು ಸಮ್ಮತಿಸಲಿಲ್ಲ. ಅಷ್ಟರಲ್ಲಿ ಎದುರಿನ ಗೋಡೆಗೆ ತೂಗುಹಾಕಿದ್ದ ಗಾಂಧೀಜಿಯವರ ಫೋಟೊ ನೋಡಿದ ಇನಸ್ಪೆಕ್ಟರ್ ಅದನ್ನು ಕಿತ್ತು, ನೆಲಕ್ಕೆಸೆದು ಬೂಟುಗಾಲಿನಿಂದ ತುಳಿದ. ಆ ದೃಶ್ಯ ನೋಡಲಾಗದ ರಾಚನಾಯ್ಕರ ಮನೆತನದ ನಾಗಮ್ಮ ಎಂಬ ಮಹಿಳೆ ಆವೇಶದಲ್ಲಿ ಚಪ್ಪಲಿ ತೆಗೆದು ಇನಸ್ಪೆಕ್ಟರ್‌ನ ಕಪಾಳಕ್ಕೆ ಹೊಡೆದಳಂತೆ. ಇಂಥ ಅನೇಕ ಪ್ರಕರಣಗಳು. 'ಚೆನ್ನಮ್ಮ' ನಾಟಕದ ಉಡಿಯಲ್ಲಿ ತುಂಬಿವೆ.

ರಂಗಭೂಮಿ ದೃಶ್ಯಕಾವ್ಯವಾಗಿ ತನ್ನ ಕಾಲದ ಸಂವೇದನೆಗಳನ್ನು, ತನ್ನ ಸುತ್ತಣ ಸಮಾಜದ ಆಶೋತ್ತರಗಳನ್ನು, ತುಡಿತಗಳನ್ನು ಹೇಗೆ ಒಳಹೊಕ್ಕು ರಂಗಸ್ಥಳದಲ್ಲಿ ಕಲಾತ್ಮಕವಾಗಿ ತೋರಿಸುತ್ತದೆ ಎನ್ನಲು 'ಕಿತ್ತೂರು ಕೇಸರಿ' ನಾಟಕ ಒಂದು ಅತ್ಯುತ್ತಮ ನಿದರ್ಶನ. ಈ ನಾಟಕವನ್ನು ಆಡುತ್ತ ಅಬ್ಬಿಗೇರಿ ಕಂಪನಿಯು ಗದುಗಿನಿಂದ ಹುಬ್ಬಳ್ಳಿ, ಧಾರವಾಡ, ಕಿತ್ತೂರ ಮುಗಿಸಿ ಬೈಲಹೊಂಗಲ ಕ್ಯಾಂಪ್ ಮಾಡಿತು. ಅಷ್ಟೊತ್ತಿಗೆ ಅಧಿಕಾರಿಗಳು ಅದರ ವಿರುದ್ಧ ಸಮರ ಸಾರಿದರು. ನಿಷೇಧಾಜ್ಞೆ ತಂದರು. ಬಸನಗೌಡರು ಲೈಸನ್ಸ್ ಸಲುವಾಗಿ ಕೋರ್ಟ ಕಚೇರಿ ಅಲೆದಾಡತೊಡಗಿದರು. ಆಗ ಕಂಪನಿ ಮೈಸೂರು, ಬೆಂಗಳೂರು ಪ್ರವಾಸ ಹೊರಟಿತು. 'ಚೆನ್ನಮ್ಮ' ನಾಟಕ ಬದಲಿಸಿ ಬೇರೊಂದು ನಾಟಕ ಆಡಲು ಸಿದ್ಧತೆ ನಡೆಯಿತಾದರೂ ಬ್ರಿಟಿಷ್ ಸರಕಾರದ ನಿಲುವು ಬದಲಾಗಲಿಲ್ಲ. 'ಚೆನ್ನಮ್ಮ' ನಾಟಕಕ್ಕೆ ಅನುಮತಿ ಸಿಗಲಿಲ್ಲ. ಅದೇ ನಾಟಕದಿಂದ ಖ್ಯಾತಿಗೇರಿದ್ದ ಅಬ್ಬಿಗೇರಿಯ 'ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ' ಇತಿಹಾಸದ ಪುಟ ಸೇರಿತು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ 'ಚೆನ್ನಮ್ಮ' ನಾಟಕ ಮಾಡಿದ ಪವಾಡವನ್ನು, ಅದರ ಪ್ರಯೋಗದ ಅವಿಸ್ಮರಣೀಯ ಅನುಭವಗಳನ್ನು ನಮ್ಮ ರಂಗಭೂಮಿ ಕಲಾವಿದರು ಇವತ್ತಿಗೂ ಮೆಲುಕು ಹಾಕುತ್ತಾರೆ. ಒಂದು ನಾಟಕವು ವಸಾಹತುಶಾಹಿ ವ್ಯವಸ್ಥೆಗೆ ಹೇಗೆ ಭಯವನ್ನುಂಟು ಮಾಡಿತು. ಅದರ



ಪರಿಣಾಮವಾಗಿ ವ್ಯವಸ್ಥೆ ಅನುಸರಿಸಿದ ದಮನ ನೀತಿಗೆ ನಾಟಕ ಹೇಗೆ ಮೌನವಾಯಿತು ಎಂಬುದರ ವಿವರಗಳು ಕೇವಲ ರಂಗಭೂಮಿಯ ಚರಿತ್ರೆಯಲ್ಲಿ ಮಾತ್ರ ದಾಖಲಾದರೆ ಸಾಲದು. ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿಯೂ ದಾಖಲಾಗಬೇಕು. ಕಿತ್ತೂರ ಚೆನ್ನಮ್ಮ ನಾಟಕವನ್ನಾಡಿ ಅಬ್ಬಿಗೇರಿ ಕಂಪನಿ, ನರಗುಂದ ಮುತ್ತಿಗೆ ನಾಟಕವಾಡಿ ಭಾಗ್ಯೋದಯ ಕಂಪನಿ, ಸಂಗೊಳ್ಳಿ ರಾಯಣ್ಣ ನಾಟಕವಾಡಿ ಸಂಪಗಾವಿ ಕಂಪನ ಬ್ರಿಟಿಷ್ ಅಧಿಕಾರಿಗಳಿಂದ ತೊಂದರೆಗೊಳಗಾದವು.

ಪೋಲೀಸರು ನಾಟಕದ ಚೋಪಡಿ ಜಪ್ತ ಮಾಡುತ್ತಿದ್ದರು. ನಟರನ್ನು ಬಂಧಿಸುತ್ತಿದ್ದರು. ನಾಟಕ ಆಡಲು ಲೈಸನ್ಸ್ ಕೊಡುತ್ತಿರಲಿಲ್ಲ. ಆದರೂ ನಮ್ಮ ಜನ ನಾಟಕ ಆಡುವ ಸಾಹಸ ಬಿಡುತ್ತಿರಲಿಲ್ಲ. 'ಪೋಲೀಸರು ನಾಟಕ ಚೋಪಡಿ ಜಪ್ತ ಮಾಡಬಹುದು, ಆದರೆ ನಮ್ಮ ನಾಲಿಗೆ ಮೇಲೆ ಮೂಡಿದ ಅಕ್ಷರಗಳನ್ನು ಅಳಿಸಿ ಹಾಕಲು ಸಾಧ್ಯವಿಲ್ಲ' ಎಂದು ವಾಲಿ ಚೆನ್ನಪ್ಪ, ಬೆಳವಡಿ ಶಿವಬಸಪ್ಪ ಇತ್ಯಾದಿ ಕಲಾವಿದರು ಜೇಲಿನಿಂದ ಹೊರಬಂದ ತಕ್ಷಣ ಮತ್ತೆ ಗುಟ್ಟಾಗಿ ಒಂದಾಗುತ್ತಿದ್ದರು. ನಾಟಕ ಆಡುತ್ತಿದ್ದರು. ಪೋಲೀಸರಿಗೆ ತಿಳಿಯುತ್ತಿದ್ದಂತೆ ಭೂಗತರಾಗುತ್ತಿದ್ದರು. ಹೀಗೆ ನಾಟಕಕ್ಕೂ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೂ ಒಂದು ಅನ್ಯೋನ್ಯ ಸಂಬಂಧವಿತ್ತು.

ಸ್ವಾತಂತ್ರ್ಯ ಸಿಕ್ಕಮೇಲೆಯೂ 'ಕಿತ್ತೂರ ಚೆನ್ನಮ್ಮ' ನಾಟಕ ಇತಿಹಾಸ ನಿರ್ಮಿಸಿತು; ಅದು ರಂಗಭೂಮಿಯ ದೃಷ್ಟಿಯಿಂದ. ಬಾದಾಮಿ ಹತ್ತಿರದ ಸುಳ್ಳ ಗ್ರಾಮದ ಮಲ್ಲನಗೌಡ ದೇಸಾಯಿ ಅವರಿಗೆ ಚೆನ್ನಮ್ಮಳ ಚರಿತ್ರೆಯ ಬಗ್ಗೆ ಬಹಳ ಅಭಿಮಾನ; ನಾಟಕದ ಬಗೆಗೂ. ಅವರು ದೇಸಗತಿ ಮನೆತನದವಳಾದ ಚೆನ್ನಮ್ಮನ ಚರಿತ್ರೆ ಅದ್ದೂರಿಯಾಗಿ ರಂಗಭೂಮಿಗೆ ತರುವ ಉದ್ದೇಶದಿಂದ ಪ್ರಯತ್ನಶೀಲರಾದರು. ಕಂದಗಲ್ ಹಣಮಂತರಾಯರಿಗೆ ನಾಟಕ ಬರೆಯಲು ಹೇಳಿದರು. ಚಿಕ್ಕೋಡಿ ಶಿವಲಿಂಗಸ್ವಾಮಿಗಳು ಬರೆದಿದ್ದ ನಾಟಕದಲ್ಲಿ ಚರಿತ್ರೆಯ ಭಾಗಕ್ಕೆ ಅಷ್ಟು ಮಹತ್ವ ಸಿಕ್ಕಿರಲಿಲ್ಲ. ಅದು ಸ್ವಾತಂತ್ರ್ಯ ಚಳವಳಿಗೆ ಸ್ಫೂರ್ತಿಯಾಗುವ ರೀತಿಯಲ್ಲಿ ರಚನೆಯಾಗಿತ್ತು. ಕಾರಣ ಹೊಸ ನಾಟಕದ ರಚನೆಗೆ ದೇಸಾಯಿಯವರು ಮುಂದಾದರು. ದೇಸಾಯರ ಸೂಚನೆಯಂತೆ

ಕಂದಗಲ್ಲರು ಕಿತ್ತೂರಿಗೆ ಹೋಗಿ, ಅಲ್ಲಿಯ ಅರಮನೆ, ಕಲ್ಮಠಗಳಿಗೆ ಭೇಟಿ ನೀಡಿ; ತಲ್ಲೂರ ರಾಯನಗೌಡರಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿ ನಾಟಕ ಬರೆದರು. ಕಂದಗಲ್ಲರು ಬರೆದ ಕೊನೆಯ ನಾಟಕವಿದು.

ಆರ್. ನಾಗರತ್ನಮ್ಮ ಅವರ ಸ್ತ್ರೀ ನಾಟಕ ಮಂಡಳಿಯಲ್ಲಿ ಶ್ರೀಕೃಷ್ಣನ ಪಾತ್ರದಿಂದ ಜನಪ್ರಿಯಳಾಗಿದ್ದ ಎಚ್.ಪಿ. ಸರೋಜಾದೇವಿಯನ್ನು ಚೆನ್ನಮ್ಮ ಪಾತ್ರಕ್ಕಾಗಿ ಕರೆಸಲಾಯಿತು. ಉಳಿದ ಪಾತ್ರಗಳಿಗಾಗಿ ಡಿ. ದುರ್ಗಾದಾಸ, ಅಮೀನಗಡ ಲಾಡಸಾಹೇಬ, ಹೂವಿನ ಹಡಗಲಿ ವೀರಭದ್ರಪ್ಪ ಮುಂತಾದ ಹೆಸರಾಂತ ನಟರನ್ನು ಕೂಡಿಸಿದರು. ಗದುಗಿನಲ್ಲಿ ನಾಟಕದ ತಾಲೀಮು ಸುರುವಾಯಿತು. ಮೈಸೂರಿನ ಮರಿಸ್ವಾಮಿ ಪೇಂಟರ್, ರಂಗಶಿಲ್ಪಿ ಕಾಳಾಚಾರಿಯವರಿಂದ ಭವ್ಯದೃಶ್ಯಾವಳಿಗಳು, ಕರಂದಿಕರ ಮತ್ತು ಶಂಕ್ರಪ್ಪ ಬಡಿಗೇರ ಇವರಿಂದ ಚಲಿಸುವ ರಂಗಮಂಚ ಸಿದ್ಧವಾದವು. ಹಾರ್ಮೋನಿಯಂ ನುಡಿಸಲು ಪಿ.ಬಿ.ಪಟ್ಟಣಶೆಟ್ಟಿ ಬಂದರು. ತಬಲಾ ನುಡಿಸಲು ಮರಿಸ್ವಾಮಿ ಮಧುರೆ, ಗಿಟಾರ್ ಸಲುವಾಗಿ ಗುರಪ್ಪ ಸವದತ್ತಿ ಕನ್ನಡ ರಂಗಭೂಮಿಯ ಮೇಲೆ ಕೀರ್ತಿ ಸಂಪಾದಿಸಿದ ಪ್ರತಿಭಾಸಂಪನ್ನ ಕಲಾವಿದರಿಂದ ರಂಗತಾಲೀಮಿಗೆ ರಂಗೇರಿತು. ೧೯೬೬ ರಲ್ಲಿ ಮಲ್ಲನಗೌಡ ದೇಸಾಯಿ ಅವರ ನೇತೃತ್ವದಲ್ಲಿ 'ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಸುಳ್ಳ' ತಲೆಯೆತ್ತಿತು.

ಚೆನ್ನಮ್ಮನ ಸಮಾಧಿ ಇರುವ ಬೈಲಹೊಂಗಲದಲ್ಲಿಯೇ ನಾಟಕದ ಮೊದಲ ಪ್ರಯೋಗವಾಗಬೇಕೆಂದು ನಿಶ್ಚಯವಾಯಿತು. ಮುಕ್ತಿಮಂದಿರದ ಆನೆ, ಕೋಟೆಕಲ್ ದೇಸಾಯಿಯವರಿಂದ ಏಳುಗೇಣಿನ ಬಿಳಿಕುದುರೆ ರಂಗದ ಮೇಲೆ ಓಡಾಡಲು ತಯಾರಾದವು.

ಸಾವಿರಾರು ಜನ ಪ್ರೇಕ್ಷಕರ ಸಮ್ಮುಖದಲ್ಲಿ ಬೆಳಗಾವಿಯ ಅಂದಿನ ಸಹಾಯಕ ವಿಭಾಗಾಧಿಕಾರಿ ಮಹಾರುದ್ರಯ್ಯನವರ ಅಧ್ಯಕ್ಷತೆಯಲ್ಲಿ ನಾಟಕದ ಉದ್ಘಾಟನೆಯಾಯಿತು. ಬನ್ನಿ ಮಹಾಂಕಾಳಿಯ ಪೂಜೆಯ ಸನ್ನಿವೇಶ. ಆರತಿಯಾದ ಮೇಲೆ ಆನೆಯು ಸೊಂಡಿಲಿನಿಂದ ಗುರುಗಳ ಕೊರಳಿಗೆ ಮಾಲೆ ಹಾಕುವ ನೋಟ ಪ್ರೇಕ್ಷಕರಿಗೆ ಅದ್ಭುತವೆನಿಸಿತು. ವೀರಗಚ್ಚೆ ಹಾಕಿ



ಬಿಚ್ಚುಗತ್ತಿ ಹಿಡಿದು ಕುದುರೆಯೇರಿ ಬರುವ ವೀರವನಿತೆ ಚೆನ್ನಮ್ಮನ ಅಭಿನಯ ರೋಮಾಂಚನವಿಟ್ಟಿತು. ಡಿ. ದುರ್ಗಾದಾಸ ರುದ್ರಪ್ಪ ನಾಯಕನಾಗಿ, ಲಾಡಸಾಬ ಮಲ್ಲಪ್ಪಶೆಟ್ಟಿಯಾಗಿ, ಚೆನ್ನಬಸಪ್ಪ ದಾವಣಗೆರೆ ಥ್ಯಾಕರೆಯಾಗಿ, ಹೂವಿನಹಡಗಲಿ ವೀರಭದ್ರಪ್ಪ ಕಮೀಶನರ್ ಆಗಿ ಅದ್ಭುತವೆನ್ನುವಂತೆ ಅಭಿನಯ ಕೌಶಲ್ಯ ಮೆರೆದರು. ರಂಗಸ್ಥಳದಲ್ಲಿ ಆನೆ ಕುದುರೆಗಳು ಓಡಾಡಿದವು. ನಾಟಕ ನೋಡಿದ ಜನರು ಚನ್ನಮ್ಮನ ಗುಣಗಾನ ಮಾಡಿದರು. ನಾಟಕದ ಕೀರ್ತಿ ಎಲ್ಲೆಡೆಗೆ ಸುದ್ದಿಯಾಯಿತು. ಪ್ರೇಕ್ಷಕರ ಗದ್ದಲ ನಿಯಂತ್ರಿಸಲು ಪೋಲೀಸರು ಬಂದೋಬಸ್ತಿಗೆ ಬರಬೇಕಾಯಿತು. ಸುಳ್ಳದ ದೇಸಾಯರ ಈ ಸಾಧನೆ ಸಹಿಸದ ಕೆಲವು ದುಷ್ಕರ್ಮಿಗಳು ಸಂಘದ ಸಂಪತ್ತಿಗೆ ಬೆಂಕಿ ಹಚ್ಚಿದರು. ಆದರೆ ದೇಸಾಯರು ಛಲದಂಕಮಲ್ಲನಾಗಿ ಕಂಪನಿಯನ್ನು ಮತ್ತೆ ಅದೇ ವೈಭವದಿಂದ ನಿಲ್ಲಿಸಿ 'ಚೆನ್ನಮ್ಮ'ನ ನಾಟಕ ಆಡಿದರು. ಈಗ ಅದೆಲ್ಲ ಇತಿಹಾಸ. ಚೆನ್ನಮ್ಮನ ಇತಿಹಾಸವು ಹೊಸ ಇತಿಹಾಸಕ್ಕೆ ನಾಂದಿಯಾಗುವಂತೆ. ರಂಗಭೂಮಿಯು ಅವಳ ಬದುಕನ್ನು ಪ್ರದರ್ಶಿಸಿತು. ಚೆನ್ನಮ್ಮನ ಸ್ವಾಭಿಮಾನ, ಸ್ವಾತಂತ್ರ್ಯ ಪ್ರೀತಿಯ ಇತಿಹಾಸ ನಮಗೆಲ್ಲ ನಿರಂತರ ಸ್ಫೂರ್ತಿಯಾಗಬೇಕು.

ಇದು ಕಿತ್ತೂರು ಸಂಸ್ಥಾನ ಬ್ರಿಟಿಷರೊಂದಿಗೆ ಹೋರಾಡಿದ ಕಥೆ. ಇಡೀ ಭಾರತದಲ್ಲಿ ೧೮೫೭ರ ದಂಗೆಗಿಂತ ಮೊದಲೇ ಆಂಗ್ಲರ ವಿರುದ್ಧ ಹೋರಾಡಿದ ಕೀರ್ತಿ ಕಿತ್ತೂರಿಗೆ ಸಲ್ಲುತ್ತದೆ. ಅಂತೆಯೇ ರಾಣಿ ಚನ್ನಮ್ಮಳನ್ನು ಸ್ವಾತಂತ್ರ್ಯ ಭಾರತದ ಬೆಳ್ಳಿಚುಕ್ಕೆ ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖